
నిన్న తండ్రి

— శివం



ನನ್ನ ತಂದೆ -1

ನನ್ನ ತಂದೆ

ನನ್ನ ತಂದೆಯ ನೆನಪು ನನಗೆ ಸ್ಪಷ್ಟವಾಗಿ ಇಲ್ಲ. ಕೆಲವು [illegible] ಮಾನಸಿಕ [illegible] ಬಿಡಿ ಬಿಡಿಯಾಗಿ ಬರುತ್ತವೆ. ಕೊನೆ ದಿನಗಳ [illegible] ಹಿಂಗೆ ಹಾಲು [illegible]ಯ ಮುಂದೆ ಕುಳಿತ ಅವರ ನೆನಪೊಂದು; ನನಗೆ ಅಕ್ಷರ [illegible] ಕೊಡುತ್ತಿದ್ದ ನೆನಪೊಂದು; ಕೊನೆಗೊಂದು ದಿವಸ ನೆಲದ ಮೇಲೆ ಅವರು ಮಲಗಿದ್ದ ಮತ್ತು ನನ್ನ ತಾಯಿ ಬಳಿ [illegible] ಬಿಕ್ಕಿಕೊಂಡು ಅಳುತ್ತಿದ್ದ ನೆನಪೊಂದು.

ನನ್ನ ತಂದೆಯ ನೆನಪು ನನಗೆ ಸಂತೋಷ ಆವಿ ನೆನಪುಗಳಿಲ್ಲ. ಇದು ಸ್ವಲ್ಪ ವಿಚಿತ್ರವೆಂದು ಕೂಡ ನನಗೆ ಅನಿಸುತ್ತದೆ. ನಿಜವಾಗಿ ನಾನು ನನ್ನ ತಂದೆ ತಾಯಿಯ [illegible] ಕೊನೆಯ ಮತ್ತು [illegible] ಕೊಂಡು ಗಂಡುಮಗನಾಗಿದ್ದೆ. ನನ್ನ ಹಿಂತೆ ಮುಂದೆ, ~~[illegible]~~ ನಾಲ್ಕು [illegible]

ನನ್ನ ತಂದೆ - 2

[illegible] ನಂತರ [illegible] ಒಂದು ಗಂಟೆ
[illegible] ಆಗ
[illegible]
[illegible].
ನಾನು [illegible]
[illegible]. ನನ್ನ ತಂದೆ [illegible] ನಾನು
[illegible]. [illegible]
ನನ್ನ ತಂದೆಯ [illegible]
[illegible] ನನ್ನ [illegible]
[illegible]
[illegible]. [illegible]
[illegible]
[illegible]
[illegible] ನನ್ನ [illegible]
[illegible] ನಾನು [illegible]
[illegible]. [illegible] ನನ್ನ ತಂದೆ ನನ್ನನ್ನು
[illegible]
[illegible]
[illegible].

ನನ್ನ ತಂದೆ - 3

~~(ಹೋಮಿನ ನೆನಪು)~~ ಎಷ್ಟು ಸ್ವಾ
ತಂತ್ರ್ಯ ಎಂದರಲ್ಲ. ಆದರೆ ನನಗಂತೂ
ನನ್ನ ತಂದೆಯವರ ಮಧುರವಾದ ನೆನಪು
ನನ್ನಲ್ಲಿ ಉಳಿದಿರುವುದು ಏತಕ್ಕೆಂದರೆ
ನನಗೆ ~~[illegible]~~ ಮಾಡಬೇಕೆಂಬ ಸ್ವಾತಂತ್ರ್ಯ
ದ ಆ ಸ್ವಾತಂತ್ರ್ಯವನ್ನು ಅವರು [illegible] ಮಾಡಿ
ಕೊಟ್ಟಿದ್ದರು. [illegible]
[illegible]
[illegible]
[illegible]
[illegible] ಸ್ವಾತಂತ್ರ್ಯ [illegible]
[illegible]
[illegible]
[illegible]
[illegible]
[illegible]
[illegible]
[illegible]
ನನ್ನ [illegible]

ನನ್ನ ತಂದೆ - 4

[illegible]

ನನ್ನ ತಂದೆ - 5

ಅವರು ನನ್ನನ್ನು ಬಿಟ್ಟಿಲ್ಲ. ನನ್ನ ತಂದೆ ತನ್ನ ಕರ್ತವ್ಯವನ್ನು ನಿರ್ವಹಿಸಿ ನನಗೆ ನನ್ನ ಜೀವನದ ದಾರಿ ತೋರಿಸಿದರು. ಅವರ ನಾನು ಕರ್ತವ್ಯವನ್ನು ಮರೆಯಲ್ಲ.

"ನಾನು ಬದುಕಿರುವ ತನಕ ನಿನಗಿರುವ ತಂದೆ," ಎಂದು ತಂದೆಯವರು ಹೇಳಿದರು.

ನಾನು ಮರೆಯಲಾಗಲಿಲ್ಲ.

ಇಂದು ನನ್ನ ಮನಸ್ಸಿನಲ್ಲಿ ಉಳಿದ ಕಳೆದ ನನ್ನ ತಂದೆಯ ನೆನಪುಗಳ ಬಂದು ನೆನಪು.

ನನ್ನ ತಂದೆ ಮನಸ್ಸಿನಲ್ಲಿ ಬೇರೆ ಅರಿತುಕೊಂಡರು.

ಇದರಿಂದ ನನ್ನ ತಂದೆ ಬಹಳ [illegible] [illegible] [illegible] ಕೊಂಡ [illegible] [illegible]. ವರು [illegible] ತಿಳಿಸಲಿಲ್ಲ. ನನ್ನ [illegible] ನನ್ನ ತಂದೆ [illegible] [illegible] [illegible] [illegible] [illegible]

(6)

నన్న తండ్రి - 6

ఎంత ప్రేమ ఉండేదంటే ఆ వేళలో నన్నెల
పండు ఫలించేవారంట నాకు శ్రీ కృష్ణ
ఫీజు ఇచ్చి చదివించెను. ఉన్నతపదవి
చేస్తున్న వేళలో నన్ను గుండెల్లో పెట్టుకొని
ప్రేమించిన తండ్రి ఇది. నాకు ఉద్యో
గము ఇచ్చి గెలిపించి ఉంచినారు. ఆయన
ది నన్ను వృద్ధాప్యంలో కాపాడిన వారు
అంతేకాదు. నాకు కష్టం వచ్చినప్పుడు
అన్నీ చూసుకుంటూ నేను ఉన్న
పక్కనే ఉన్నారు. ఇంకా చేస్తున్న
సందర్భంలో అంత బాధ. ఆయన
ప్రేమతో ఉండే నాకు ఎంతో,
ముఖ్య: ఆయన ఉపదేశం, ఆయన
బుద్ధి, నిండు ప్రేమ స్వభావం
గుణము అంతా ఇచ్చారు. ఇవన్నీ
నన్ను పెంచిన, నన్ను తీర్చిదిద్దిన
వారిని ఎప్పుడూ నేను మరువని
వారికే.

నన్న తండ్రి ఇవన్నీ బోధించారు.

ನನ್ನ ತಂದೆ – 7

[illegible]

(8)

నన్న తండ్రి - 8

ఆఖరు నాన్న ఇల వదలిపోయిన వేళలో
నన్నన్ను [illegible] [illegible] [illegible]
[illegible] నన్నన్ను ప్రేమించుండ [illegible] [illegible]
నన్నే నేనడిగ. వ్యక్తిత్వాలలో గర్వ
ఆయన ఇచ్చిన ~~[illegible]~~ బిడ్డ [illegible]
ఉండుంది. అంతేనా [illegible] [illegible] [illegible]
[illegible] [illegible] [illegible] [illegible] [illegible]
[illegible] [illegible] [illegible] [illegible]
నన్ను [illegible] ~~[illegible]~~ [illegible]
నన్ను [illegible] [illegible]. [illegible] ~~[illegible]~~
~~[illegible]~~ [illegible] [illegible] [illegible]
[illegible] ~~[illegible]~~ [illegible] [illegible] [illegible]
[illegible] [illegible] [illegible] [illegible] [illegible]
[illegible] [illegible] [illegible] [illegible]
[illegible] [illegible].


ఈ [illegible] [illegible] [illegible]
నన్న తండ్రి [illegible] [illegible]
నన్నన్ను [illegible] [illegible] ~~[illegible]~~
[illegible] [illegible] [illegible]. ~~[illegible]~~

ನನ್ನ ತಂದೆ - ೧

[illegible]

ನನ್ನ ತಂದೆ – 10

ಹೇಗಲೆ ನಿನಗೆ ಬದುಕಿರ ಗೊತ್ತಿಲ್ಲ. ಇನ್ನು ಮೇಲೆ ಬೇರೆ ಆಟವಾಡ ನನ್ನ [illegible] ಬಳಿಗೆ ಕರೆ ತರಬೇಡ [illegible]," ಎಂದು ಬೇರೆ ಹೇಳು ನನಗೆ ಕಳಿಸಿದರಂತೆ.



ತನ್ಯಂ ಯಂಟಣೆ 18 ಪತ್ರಗಳು

ಕಸ್ತೂರಿ

ವರ್ಷ: ೨೬ ಸಪ್ಟೆಂಬರ್, ೧೯೮೧ ಸಂಚಿಕೆ: ೧



ಪಾ. ವೆಂ. ಆಚಾರ್ಯ

ಇಂಗ್ಲೀಷಿನ "ರೀಡರ್ಸ್ ಡೈಜೆಸ್ಟ್" ಮಾದರಿಯಲ್ಲಿ ಕನ್ನಡದಲ್ಲೊಂದು ಮಾಸಪತ್ರಿಕೆ ಬೇಕೆಂಬ ವಿಚಾರ ೧೯೫೫ ರ ಕೊನೆಯಲ್ಲಿ ಒಂದಕ್ಕಿಂತ ಹೆಚ್ಚು ಕಡೆ ಏಕಕಾಲದಲ್ಲಿ ಮೂಡಿದಂತೆ ಕಾಣುತ್ತದೆ. ಹೀಗಾಗಿ ೧೯೫೬ ರಲ್ಲಿ ಸುಮಾರಾಗಿ "ಕಸ್ತೂರಿ" ಪ್ರಾರಂಭವಾಗುವ ಹೊತ್ತಿಗೇ ಅದೇ ಗಾತ್ರ, ಅದೇ ಮಾದರಿಯ ಮತ್ತೆರಡು ಡೈಜೆಸ್ಟುಗಳು ಉತ್ತರ ಕರ್ನಾಟಕದಲ್ಲಿ ತಲೆಯೆತ್ತಿದವು.

ಲೋಕಶಿಕ್ಷಣ ಟ್ರಸ್ಟಿನಿಂದ ಒಂದು ಡೈಜೆಸ್ಟ್ ಪ್ರಾರಂಭಿಸುವ ಆಲೋಚನೆ ಹುಟ್ಟಿದ್ದು ಆಗ "ಸಂಯುಕ್ತ ಕರ್ನಾಟಕ" ಮುದ್ರಣ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀ ವಿ. ವೈ. ಜತಾರ ಮತ್ತು "ಸಂಯುಕ್ತ ಕರ್ನಾಟಕ"ದ ಮೆನೇಜರ್ ಮತ್ತು ಲೋಕಶಿಕ್ಷಣ ಟ್ರಸ್ಟಿನ ಕಾರ್ಯದರ್ಶಿಗಳಾಗಿದ್ದ ಶ್ರೀ ಎಂ. ಎಚ್. ಕೌಜಲಗಿಯವರ ತಲೆಯಲ್ಲಿ ಎಂದು ತೋರುತ್ತದೆ. ಇವರಿಬ್ಬರೂ ಆ ಅಮೇರಿಕನ್ ಮ್ಯಾಗಜಿನ್ನಿನ ಪ್ರಶಂಸಕರಾಗಿದ್ದರು; ಸಂಗಡಲೇ ಮುದ್ರಣ ವಿಭಾಗ ಹೊಸದಾಗಿ ವಿಸ್ತರಣೆ ಹೊಂದಿದ್ದಕ್ಕೆ ಮುದ್ರಣ ಕೆಲಸಕ್ಕೊಂದು ಉಪ-ಷ್ಟಂಭಕವೂ ಬೇಕೆಂಬ ವ್ಯವಹಾರ ದೃಷ್ಟಿ ಅವರಿಬ್ಬರಿಗೂ ಚೋದಕವಾಗಿತ್ತೆಂದು ನನ್ನ ಭಾವನೆ. ಈ ಕಲ್ಪನೆಯ ಬೀಜಾರೋಪಣ ಮತ್ತು ಮೊಳಕೆ-ಯೊಡೆಸುವ ಕಾರ್ಯದಲ್ಲಿ ನನ್ನ ಪಾತ್ರ ನಗಣ್ಯವಾಗಿತ್ತು. ಅದರ ಮೊಳಕೆ ಹಾಕುವಾಗ ಕೂಡ ಅಪರೂಪಕ್ಕೊಮ್ಮೆ ನನ್ನ ಹತ್ತಿರ ಪ್ರಸ್ತಾಪ ಬರುತ್ತಿತ್ತಷ್ಟೇ. ಹೊರಗಿನಿಂದ, ಆಗಲೇ ಸಾಹಿತ್ಯದಲ್ಲಿ ಉದ್ಬೋಧಯರಾದವರನ್ನು ಸಂಪಾದಕರಾಗಿ ತರುವುದಕ್ಕಾಗಿ ಸಂಧಾನಗಳೂ ನಡೆದಿದ್ದವು. ಒಂದಲ್ಲ ಒಂದು ಕಾರಣದಿಂದ ಅವು ಫಲಿತಕ್ಕೆ ಬರಲಿಲ್ಲ. ಕೊನೆಗೆ ಒಳಗಿದ್ದವರಲ್ಲೇ ಒಬ್ಬರನ್ನು ಆರಿಸುವ ಅಗತ್ಯ ಕಂಡು ಆಗಲೇ "ಕರ್ಮವೀರ" ಸಾಪ್ತಾಹಿಕದ ಬಳಗದಲ್ಲಿದ್ದ ನನ್ನನ್ನು ತಟ್ಟಿ ನೋಡಿ

ಡ್ಡಾಯಿತು. ಮತ್ತೆ ಯಾವ ಯೋಗ್ಯತೆಯಿದ್ದ ನನಗಿಲ್ಲದಿದ್ದರೂ ಕಚೇರಿಯಲ್ಲಿ ನಾನೊಂದು ತರಹದ "ಸರ್ವವಿದ್ಯಾ - ಪ್ರವೀಣ - ಏಕ - ವಿದ್ಯಾವಿಹೀನ" ಎಂದು ಹೆಸರು ಪಡೆದದ್ದು ನನ್ನ ಆಯ್ಕೆಗೆ ಕಾರಣವಾಗಿತ್ತು. "ಸಂಯುಕ್ತ ಕರ್ನಾಟಕ"ದ ಆಗಿನ ಸಂಪಾದಕ ಶ್ರೀ ಮೊಹರೆ ಹನುಮಂತರಾಯರು ಈ ಆಯ್ಕೆಗೆ ಕಾರಣರಾಗಿದ್ದರೆಂದು ಕೇಳಿದ್ದೇನೆ. ಅವರಿಗೆ ನನ್ನ ಸಾಮರ್ಥ್ಯದ ಮೇಲೆ ನನಗೂ ಇಲ್ಲದ ವಿಶ್ವಾಸ.

ನಾನು ಈ ಸಂದರ್ಭ ನನಗೆ ದೊರಕುವಂತಿದ್ದದ್ದನ್ನು ತಕ್ಷಣ ತಬ್ಬಿಕೊಂಡೆ ಎನ್ನಲಾರೆ. ಆದರೆ ಏನಾದರೂ ಕೆಲಸ ಬಿದ್ದರೆ ಹೆಗಲು ಕೊಡಲಾರೆ ಎನ್ನುವ ಅಭ್ಯಾಸವೂ ಇಲ್ಲದ್ದರಿಂದ ನಾನು ಅನುಮಾನದಿಂದಲೇ ಆದರೂ ಅದನ್ನು ಒಪ್ಪಿಕೊಂಡೆ, ಒಂದು ಶರ್ತು ಮಾತ್ರ ಹಾಕಿದೆ: ಆಗ "ಕರ್ಮವೀರ"ದಲ್ಲಿ ನನ್ನೊಡನಿದ್ದ ಶ್ರೀ (ಈಗ ದಿವಂಗತ) ಜಿ. ಜಿ. ಹೆಗಡೆಯವರನ್ನು ನನಗೆ ಸಹಕಾರಿಯಾಗಿ ಕೊಡಬೇಕೆಂಬುದಾಗಿ. ಅವರಿಗೆ ಇಂಗ್ಲೀಷಲ್ಲದೆ ಹಿಂದಿ, ಮರಾಠಿ ಭಾಷೆಗಳೂ ಬರುತ್ತಿದ್ದವಲ್ಲದೆ ಓದಿಗೆ ವೇಗವಾದ ಕಣ್ಣೂ ಬರಹಕ್ಕೆ ವೇಗವಾದ ಪೆನ್ನೂ ಇದ್ದವು.

ಹೀಗೆ ನನ್ನನ್ನು ೧೯೫೬ ಮೇ ತಿಂಗಳಲ್ಲಿ ಮತ್ತು ಹೆಗಡೆಯವರನ್ನು ಜೂನ್ ತಿಂಗಳಲ್ಲಿ "ಕರ್ಮವೀರ"ದಿಂದ ಬಿಡಿಸಿ ಹೊಸ ಕೆಲಸಕ್ಕೆ ನಿಯೋಜಿಸಿದರು. ಮತ್ತು ತಿಂಗಳುಗಟ್ಟಲೆ ನನೆಗುದಿಯಲ್ಲಿದ್ದ ಈ ಸಂಗತಿ ಒಂದು ನಿಟ್ಟಿಗೆ ಬಂದ ಮೇಲೆ ಎಂದಿಲ್ಲದ ಅವಸರದಿಂದ ಈ ಕನ್ನಡ ಡೈಜೆಸ್ಟು ಅದೇ ಸಪ್ಟೆಂಬರಿನಿಂದ ಆರಂಭವಾಗಬೇಕೆಂಬ ಸುಗ್ರೀವಾಜ್ಞೆಯನ್ನೂ ಹೊರಡಿಸಿದರು. ಪ್ರಥಮ ಸಂಚಿಕೆ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆಯಂದು ಬೆಳಕು ಕಾಣಬೇಕಿತ್ತು.

ಸರಿ, ನಾವಿಬ್ಬರೂ ಇಂಗ್ಲೀಷು, ಹಿಂದಿ, ಮರಾಠಿ ಮತ್ತು ಬಂಗಾಲಿ ಪುಸ್ತಕ, ಪತ್ರಿಕೆಗಳಿಂದ ವಿಷಯ ಸಂಗ್ರಹಕ್ಕೆ ತೊಡಗಿದೆವು. ಕೆಲ ಮಾದರಿ ಲೇಖನಗಳನ್ನು ಅಣಿಗೊಳಿಸಿ ಕಂಪೋಜು ಮಾಡಿಸಿ ಮೇಲಿನವರ ಮತ್ತು ಸಹಕಾರಿಗಳ ಅನುಮತಕ್ಕಾಗಿ ಮುಂದಿಸಿದ್ದಾಯಿತು. ಲೇಖನಗಳ ಶೈಲಿ, ಆಯ್ಕೆಗಳ ಬಗ್ಗೆ ಅಷ್ಟಿಷ್ಟು ಮತಭೇದ, ಟೀಕೆ ಟಿಪ್ಪಣಿಗಳಾದರೂ ಒಟ್ಟಿನ ಮೇಲೆ ಹೆಚ್ಚು ಕೈಹಾಕದೆ ನಮ್ಮನ್ನು ನಮ್ಮ ಪಾಡಿಗೆ ಬಿಟ್ಟರು.

ಹುಟ್ಟಲಿದ್ದ ಮಗುವಿಗೆ ಇಡತಕ್ಕ ಹೆಸರಿನ ವಿಷಯ ಮಾತ್ರ ಒಂದು ತೊಡಕು ಎದ್ದಿತು. ಹುಬ್ಬಳ್ಳಿಯಲ್ಲಿದ್ದ ನಾವೆಲ್ಲ ಅದಕ್ಕೆ "ಪರಾಗ" ಎಂಬುದು ಅನ್ವರ್ಥಕ ನಾಮವಾದೀತೆಂದು ತೀರ್ಮಾನಿಸಿ ಅದೇ ಹೆಸರಿನೊಡನೆ ಮುದ್ರಣವನ್ನು ಆರಂಭಿಸಿದ್ದೆವು. ಆದರೆ ಸಂಸ್ಥೆಯ ಧರ್ಮದರ್ಶಿಗಳೂ ಆಗ ಬಿಹಾರಿನ ರಾಜ್ಯಪಾಲರೂ ಆಗಿದ್ದ ಡಾ. ರಂಗನಾಥ ದಿವಾಕರರಿಗೆ "ಪರಾಗ" ಎಂಬುದು ಜನರಿಗೆ ಅಪರಿಚಿತ ಮತ್ತು ಅನಾಕರ್ಷಕ ಪದವೆಂಬ ಭಾವನೆಯಾಗಿ ಅವರು ಅದನ್ನು ಬದಲಿಸಿ "ಕಸ್ತೂರಿ"ಯೆಂದು ಹೆಸರಿಡಲು ಪಾಟ್ನಾದಿಂದ ತಂತಿ ಸಂದೇಶ ಕಳಿಸಿದರು. "ಪರಾಗ"ವೆಂಬುದು ಅಜ್ಞಾತ - ಅನಾಕರ್ಷಕ ಎಂಬುದನ್ನು ನಾನು ಒಪ್ಪುವುದಿಲ್ಲ. ಐದನೆ ತರಗತಿ ಓದಿದ ಕನ್ನಡ ಶಾಲಾ ಹುಡುಗನಿಗೂ ಗೊತ್ತಿದ್ದ ಶಬ್ದ ಅದು. ಆದರೆ ಇದರ ಬಗ್ಗೆ ಎಳೆದಾಡುವುದಕ್ಕೆ ಇಚ್ಛೆಯಾಗಲಿ ವೇಳೆಯಾಗಲಿ ನಮಗಿರಲಿಲ್ಲ. ಹೀಗೆ ನಮ್ಮ ಡೈಜೆಸ್ಟಿನ ಮೊದಲ ಸಂಚಿಕೆಯಲ್ಲಿ ಕೆಲ ಪುಟಗಳ ಮೇಲೆ "ಪರಾಗ", ಉಳಿದ ಪುಟಗಳ ಮೇಲೆ "ಕಸ್ತೂರಿ" ಎಂಬ ತಲೆ ಬರಹಗಳು ಇರುವುದನ್ನು ಕಾಣಬಹುದು. (ಹೊಸ ನಾಮಕರಣವಾದ ಮೇಲೆ ಶ್ರೀ ಕೌಜಲಗಿಯವರು ನನ್ನನ್ನು "ಕಸ್ತೂರಿ ಮೃಗ" ಎಂದು ಕರೆಯತೊಡಗಿದರು. ನಾನೂ "ಕಸ್ತೂರಿ ಮೃಗವನ್ನು ಕೊಂದೇ ಕಸ್ತೂರಿ ತೆಗೆಯಬೇಕಾಗುತ್ತೆ" ಎಂದು ಪ್ರತಿಯಾಗಿ ಹೇಳಿದ್ದುಂಟು.) ಇದೊಂದು ಬಿಟ್ಟರೆ ಮುಂದೆ ಸುಮಾರು ಹದಿನೆಂಟು ವರ್ಷ ನನ್ನ ಸಂಪಾದಕತ್ವದ ಅವಧಿಯಲ್ಲಿ ಡಾ. ದಿವಾಕರರಾಗಲಿ ಇತರರಾಗಲಿ ನನ್ನ ನಿರ್ಣಯಗಳಲ್ಲಿ ಕೈಹಾಕಲಿಲ್ಲ ಅಥವಾ ನನ್ನನ್ನು ಯಾವ ಕಾರಣಕ್ಕಾಗಲಿ ತರಾಟೆಗೂ ತೆಗೆದುಕೊಳ್ಳಲಿಲ್ಲವೆಂದು ಇಲ್ಲಿ ಹೇಳದೆ ಇರಲಾರೆ.

ಅಂತೂ "ಕಸ್ತೂರಿ"ಯ ಪ್ರಥಮ ಸಂಚಿಕೆ ೧೯೫೬ ಆಗಸ್ಟ್ ೨೨ ರಂದು ಹೊರಬಂತು. ಪ್ರಥಮ ಸಂಚಿಕೆಯ ೩,೦೦೦ ಪ್ರತಿಗಳನ್ನು, ಅಂಜುತ್ತ-ಅಂಜುತ್ತ, ತೆಗೆಯಲಾಗಿತ್ತು. ಸುಮಾರು ೩೦ ಲೇಖನ - ಕತೆಗಳು, ಒಂದು ಪುಸ್ತಕ ಸಂಗ್ರಹ

ಇಷ್ಟನ್ನು ಅದು ಒಳಗೊಂಡಿತ್ತು. ಪ್ರತಿಗಳೆಲ್ಲಾ ತತ್‌ಕ್ಷಣ ಮಾರಾಟವಾಗಿ ಹೋದವು. ಅದರ ಸಂಗಡ ಬೇರೆ ಎರಡು ಡೈಜಸ್ಟುಗಳೂ ಹೊರಬಂದಿದ್ದವು. ಒಂದಂತೂ ಹೆಸರಾಂತ ಸಂಪಾದಕರಾದ ಶ್ರೀ ಪಾಟೀಲ ಪುಟ್ಟಪ್ಪನವರದು. ಅನಿವಾರ್ಯವಾಗಿ ಒಂದಕ್ಕೊಂದನ್ನು ಹೋಲಿಸಲಾಯಿತು. ಉಳಿದವುಗಳೊಡನೆ ಹೋಲಿಸಿದರೆ "ಕಸ್ತೂರಿ"ಯಲ್ಲಿ ವೈವಿಧ್ಯ ಸಾಲದೆಂದು ಒಂದು ಕಡೆ, ವಿಷಯಗಳ ಪ್ರತಿಪಾದನೆ "ಜಡ"ವಾಯಿತೆಂದು ಇನ್ನೊಂದು ಕಡೆ ಟೀಕೆಗಳು ಬಂದವು. ಈ ಟೀಕೆಗಳನ್ನು ಮಾಡಿದವರಲ್ಲಿ ನನ್ನ ಮೇಲೆ ತುಂಬಾ ಅಭಿಮಾನವಿದ್ದವರೂ ಇದ್ದರು. ಮುದ್ರಣದ ವಿಷಯದಲ್ಲಿ "ಕಸ್ತೂರಿ" ಅತ್ಯುತ್ತಮವಾಗಿತ್ತೆಂಬಲ್ಲಿ ಎರಡು ಮಾತು ಇರಲಿಲ್ಲ.

"ಕಸ್ತೂರಿ"ಯ ಒಳಿತು ಕೆಡಕುಗಳೆರಡರಲ್ಲಿಯೂ ನನ್ನ ಶಕ್ತಿ–ದೌರ್ಬಲ್ಯಗಳು ಪ್ರತಿಬಿಂಬಿತವಾಗಿದ್ದವು. ಮೊದಲನೆಯದಾಗಿ, ನಾನು ಅದನ್ನು ರೂಪಿಸುವಲ್ಲಿ ತೀರ ಸಾಮಾನ್ಯ ಓದುಗನನ್ನು ಮೆಚ್ಚಿಸುವ ಧ್ಯೇಯ ಇಟ್ಟುಕೊಂಡಿರಲಿಲ್ಲ. ಸಾಧಾರಣ ಸುಶಿಕ್ಷಿತರಿಗಿಂತ ಕೆಳ ಮಟ್ಟದಲ್ಲಿರುವವರನ್ನು ಮೆಚ್ಚಿಸುವುದು ನನಗೆ ಸಾಧ್ಯವೇ ಇರಲಿಲ್ಲ – ಈಗಲೂ ಇಲ್ಲ. ನನ್ನ ಆಸಕ್ತಿಗಳೇ ಹಾಗೆ. ಸುಮಾರು ಎಸ್. ಎಸ್. ಎಲ್. ಸಿ. ಉತ್ತೀರ್ಣರಾಗಿ ಅಥವಾ ಕಾಲೇಜಿನಲ್ಲಿ ಒಂದೆರಡು ವರ್ಷಗಳನ್ನು ಕಳೆದ, ಕುತೂಹಲಿಗಳಾದ ಓದುಗರ ಬಳಗವನ್ನು ಗುರಿಯಾಗಿ ಮಾಡಿಕೊಂಡಿದ್ದೆ. ಈ ವರ್ಗ ಬೆಳೆಯುತ್ತಲೇ ಇರುವ ವರ್ಗ. ಅವರಿಗೆ ಚೆನ್ನಾಗಿ ಕಂಡರೆ "ಕಸ್ತೂರಿ" ತನ್ನನ್ನು ತಾನು ಪೊರೆದುಕೊಳ್ಳಬಲ್ಲದು ಎಂಬುದು ನನ್ನ ಅಂದಾಜು.

ಮೊದಲ ಸಂಚಿಕೆಯಲ್ಲೇ ಒಂದು ಹರಳು ಹಲ್ಲಿಗೆ ಸಿಕ್ಕಿತು. ಸಂಸ್ಕೃತದಲ್ಲಿ "ವಿಶ್ವಗುಣಾದರ್ಶ ಚಂಪೂ" ಎಂಬ ವಿಲಕ್ಷಣ ಪುಸ್ತಕವೊಂದಿದೆ. ಅದರಲ್ಲಿ ಸುಮಾರು ಮೂರು ಮೂರೂವರೆ ಶತಮಾನ ಹಿಂದಿನ ಭಾರತದಲ್ಲಿನ ಸ್ಥಿತಿಗತಿಗಳ ಬಗ್ಗೆ ತುಂಬಾ ಕಡು ಸನಾತನಿಯಾದ ಅಯ್ಯಂಗಾರ್ ಬ್ರಾಹ್ಮಣನೊಬ್ಬನ ದೃಷ್ಟಿಕ್ಷೇಪ ಸ್ವಾರಸ್ಯವಾಗಿ ಬಂದಿದೆ. ಅನೇಕ ದೇವ ದೇವತೆಗಳು ಮಹಾ ಪುರುಷರು ಮಾತ್ರವಲ್ಲದೆ ದೇಶದ ಬೇರೆ ಬೇರೆ ಪ್ರಾಂತಗಳ ಜನರ ನಡೆ ನುಡಿಗಳ ಬಗ್ಗೆಯೂ ಅಲ್ಲಿ ಹರಿತವಾದ ಕಟಾಕ್ಷ ವಿಕ್ಷೇಪವಿತ್ತು. ಕನ್ನಡಿಗರ ಬೇರೆ ಬೇರೆ ಪಂಗಡಗಳನ್ನೂ ಆ ಲೇಖಕ ಟೀಕಿಸಿದ್ದ. ಆ ಪುಸ್ತಕದ, ನಾನು ಸ್ವಾರಸ್ಯವೆಂದು ಬಗೆದ, ಅಂಶಗಳನ್ನು ಸಂಗ್ರಹಿಸಿ ಮೊದಲನೆ ಸಂಚಿಕೆಯಲ್ಲಿ ಕೊಟ್ಟಿದ್ದೆ. ಅದರಲ್ಲಿ ಬಂದಿದ್ದ ಟೀಕೆಗಳು ಒಂದು ಪ್ರಬಲ ವರ್ಗದ ಕೆಲ ಸನಾತನಿಗಳನ್ನು ಕೆರಳಿಸಿತು. ಅವರು "ಕಸ್ತೂರಿ"ಯ ಬ್ರಾಹ್ಮಣತ್ವವನ್ನು ಎತ್ತಿ ತೋರಿಸಿ ಹಂಗಿಸಿ, ಇದಕ್ಕೆ ತಮ್ಮ ಸಮುದಾಯವನ್ನು ಲೇವಡಿ ಮಾಡುವ ದುರುದ್ದೇಶವನ್ನು ಆರೋಪಿಸಿ ಸಾಕಷ್ಟು ಗಲಾಟೆ ಎಬ್ಬಿಸಿದರು. "ಕಸ್ತೂರಿ" ಯನ್ನು ಬಹಿಷ್ಕರಿಸಬೇಕೆಂದು ಕೂಡ ಅವರು ಕರೆ ಕೊಟ್ಟರು. ಒಂದು ಪುಸ್ತಕದ ಪರಿಚಯವನ್ನು ಕೇವಲ ವಸ್ತುನಿಷ್ಠ ದೃಷ್ಟಿಯಿಂದ ಮಾಡಿದ್ದು ಯಾರಿಗಾದರೂ ಇಷ್ಟು ನಿದ್ದೆಗೆಡಿಸಬಹುದೆಂದು ನಾನು ಊಹಿಸಿರಲಿಲ್ಲ. ಸುದೈವದಿಂದ ಸ್ವಲ್ಪ ಸಮಯದಲ್ಲೇ ಈ ಕಿರು ಸುಂಟರಗಾಳಿ ತಂತಾನೇ ಶಾಂತವಾಯಿತು.

ಕೆಲ ಕಾಲಾನಂತರ ಇಂಥದೇ ಇನ್ನೊಂದು ಪ್ರಸಂಗ ಘಟಿಸಿತು. ಗಾಂಧೀಜಿಯ ಕೊನೆಯ ದಿನಗಳನ್ನು ಕುರಿತು ಅವರ ಕಾರ್ಯದರ್ಶಿಗಳಾಗಿದ್ದ ಶ್ರೀ ಪ್ಯಾರೇಲಾಲರು "The Last Phase" ಎಂಬೊಂದು ಬೃಹತ್ ಗ್ರಂಥವನ್ನು ಎರಡು ಭಾಗಗಳಲ್ಲಿ ಪ್ರಕಟಿಸಿದ್ದರು. ಅದರ ಕೆಲ ಮನ ಕಲಕುವ ಭಾಗಗಳನ್ನು ಪ್ಯಾರೇಲಾಲರ ಅನುಮತಿಯಿಂದ "ಕಸ್ತೂರಿ"ಯ ಪುಸ್ತಕ ವಿಭಾಗದಲ್ಲಿ ಪ್ರಕಟಿಸಿದೆವು. ಅದರಲ್ಲಿ ರಾಷ್ಟ್ರೀಯ ಸ್ವಯಂ–ಸೇವಕ ಸಂಘದ ಬಗ್ಗೆ ಬಂದ ಮಾತುಗಳು ಆ ಸಂಸ್ಥೆಯ ಅಭಿಮಾನಿಗಳನ್ನು ಕೆರಳಿಸಿ ಅವರು ತೀಕ್ಷ್ಣ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ನಮ್ಮ ಸಂಸ್ಥೆಯ ಹಿರಿಯರೂ "ಕಸ್ತೂರಿ" ಸಂಪಾದಕರೆಂಬ ಹೊಣೆ ಹೊತ್ತವರೂ ಆದ ಡಾ. ದಿವಾಕರರು ಒಂದು ಚಿಕ್ಕ ವಿವರಣೆಯನ್ನು ಪ್ರಕಟಿಸಿದ ಮೇಲೆ ಪ್ರಸಂಗ ಅಲ್ಲಿಗೆ ನಿಂತಿತು.

ಪ್ರಥಮ ಸಂಚಿಕೆ ಬೇಡಿದವರಿಗೆಲ್ಲ ಸಿಗಲಿಲ್ಲವಾದ್ದರಿಂದ ಎರಡನೇ ಸಂಚಿಕೆಯ ೪,೦೦೦ ಪ್ರತಿಗಳನ್ನು ತೆಗೆಯಲಾಯಿತು. ಆದರೆ ಕೆಲ ಪ್ರತಿಗಳು ಉಳಿದ್ದದರಿಂದ ಸಂಚಾಲಕರಿಗೆ ಸ್ವಲ್ಪ ಚಿಂತೆ

ಆಯಿತು. ನನ್ನ ಕರಾರು ಮೊದಲಿಂದ ಹೀಗಿತ್ತು: ಆರು ತಿಂಗಳು ನೋಡಿರಿ. ನನ್ನಿಂದ ಬಗೆಹರಿಯುವುದಿಲ್ಲವೆಂದು ಸಿದ್ಧವಾದರೆ ನನ್ನನ್ನು "ಕರ್ಮವೀರ"ಕ್ಕೆ ಮರಳಿಸಿ ಬೇರೊಬ್ಬನಿಗೆ ಹೊಣೆ ಒಪ್ಪಿಸಿರಿ. ಹಾಂ ಹೂಂ ಎನ್ನುವಷ್ಟರಲ್ಲಿ ಆ ಗಡುವು ಮುಗಿಯಿತು. ಪ್ರಸಾರ ಸಂಖ್ಯೆಯಲ್ಲಿ ಏರಿಕೆ ಕಾಣಿಸ ತೊಡಗಿತು. ಈ ಅವಧಿಯಲ್ಲಿ "ಕಸ್ತೂರಿ" ಅಷ್ಟಿಷ್ಟು ಹಣ ಕಳೆದುಕೊಂಡಿತ್ತು. ಆದರೆ ಅನಂತರ ಅದು ಆದಾಯವೆಚ್ಚಗಳನ್ನು ಬಾಯಿಗೂಡಿಸ-ತೊಡಗಿ ಒಂದು ವರ್ಷದಲ್ಲಿ ಸ್ವಲ್ಪ ಲಾಭ ತೋರಿಸಿತು. ಎರಡನೇ ವರ್ಷದ ಅಂತ್ಯಕ್ಕೆ ಪ್ರಸಾರ ೭,೦೦೦ಕ್ಕೆ ಏರಿತು. ಆಮೇಲೆ ಪ್ರಸಾರ ಒಂದೇ ಸಮನೆ ಏರುತ್ತ "ಕಸ್ತೂರಿ" ತನ್ನ ಸ್ಥಾನವನ್ನು ಸ್ಥಿರಪಡಿಸಿಕೊಂಡಿತು. ನನ್ನ ಅಂದಾಜಿನ ಪ್ರಕಾರ ಹತ್ತು ವರ್ಷಗಳಲ್ಲಿ ಅದು ತನಗೆ ಬೇಕಾದ ಬಂಡವಾಳವನ್ನೆಲ್ಲ ಗಳಿಸಿಕೊಂಡಿತ್ತು.

"ಕಸ್ತೂರಿ"ಯ ಪ್ರಥಮ ಸಂಪಾದಕನಾಗಿ ನನ್ನ ಅನುಭವಗಳನ್ನು ಸಿಂಹಾವಲೋಕನ ಮಾಡಬೇಕೆಂದು ನನಗೆ ಕೋರಲಾಗಿದೆ. "ಅನುಭವ" ಎಂಬುದಕ್ಕೆ ಅದ್ಭುತವಾದ ವಿಚಿತ್ರವಾದ ಸನ್ನಿವೇಶ ಎನ್ನುವುದು ಅರ್ಥವಾದರೆ ಈ ಕೋರಿಕೆಗೆ ಉತ್ತರ ಬಹುಮಟ್ಟಿಗೆ ನಕಾರಾತ್ಮಕವಾದದ್ದೇ. ಅನೇಕ "ಯಶೋಗಾಥೆ"ಗಳ ಹಿಂದೆ ದಿನ ದಿನದ ದುಡಿಮೆಯ ನಿರ್ವಿಶೇಷವೇ ತುಂಬಿರುತ್ತದೆ – ಹೇಳಿಕೊಳ್ಳತಕ್ಕದ್ದು ಅಲ್ಲಿರುವುದು ಅಪರೂಪ. ಪತ್ರಿಕೋದ್ಯಮಿಯ ಬದುಕಿನಲ್ಲಿ ಕೂಡ ಇದೇ ಮಾತು ಇದೆ. ನಿಜ ಕೇಳಿದರೆ ಪತ್ರಿಕೋದ್ಯಮದಲ್ಲಿ ಅತ್ಯಂತ ಕೌತುಕಪೂರ್ಣವಾದದ್ದು ವರದಿಗಾರನ ಅನುಭವ. ಭಾರಿ ಆಸಾಮಿಗಳನ್ನು–ಚಿಕ್ಕದೊಡ್ಡ, ಒಳ್ಳೇ–ಕೆಟ್ಟ, ಹೆ–ಗ್ಗಡೆಗಳನ್ನು ಅವರ ಎಲ್ಲ ಕುಂಟುಕೊರೆ ವರ್ಮ ಮರ್ಮಗಳನ್ನು ಕಾಣುವ ಯೋಗ ಅವನಿಗೆ ಲಭಿಸುತ್ತದೆ. ಮಹಾಘಟನೆಗಳನ್ನು ಅದುವಾಗ ಅಡುಗೆ ಮನೆಯಲ್ಲೇ ಅವುಗಳನ್ನು ಕಾಣುವ ಸಂದರ್ಭವೂ ಅವನಿಗೆ ದೊರೆಯುತ್ತದೆ. ಅವನು ತಾನೇ ಘಟನೆಗಳ ಬಗ್ಗೆ ಬೆಂಬತ್ತಿ ಓಡುವಾತ; ಕೆಲವೊಮ್ಮೆ ಅವುಗಳೇ ಅವನನ್ನು ಬೆಂಬತ್ತಿ ಬಂದು ಕಡೆಹಾಯ್ದು ಹೋಗುವುದನ್ನು ಬೆರಗಿನಿಂದ ಕಾಣುವಾತ. ಇದು ಕೂಡ ರಾಜಧಾನಿ ಪಟ್ಟಣಗಳಲ್ಲಿರುವವರಿಗೆ ಸಲ್ಲುವ ಮಾತು. ಅಲ್ಲಿನ ದಿನಪತ್ರಿಕೆಗಳ ಸಂಪಾದಕರಿಗೂ ಹಲವು ಕಂಟಕ–ಒತ್ತಡಗಳ ಅನುಭವವಾಗುತ್ತದೆ. ಇತರರ ಮಟ್ಟಿಗೆ ಅದು ಮೊಹರೆ ಹನುಮಂತರಾಯರು ಹೇಳುತ್ತಿದ್ದಂತೆ ದಿನದಿನದ ಜೆರಿಗೆಗೆ ಸೂಲಗಿತ್ತಿಯಾಗುವ ಕೆಲಸ, ಏಕತಾನತೆ.

"ಕಸ್ತೂರಿ"ಯ ಬೆಳವಣಿಗೆಯಲ್ಲಿ ದಿವಂಗತ ಹೆಗಡೆಯವರಿಗಾಗಲಿ ನನಗಾಗಲಿ ಆದದ್ದು ಹೀಗೆಯೇ. ತಿಂಗಳಿಗೆ ೨೫–೩೦ ಲೇಖನ-ಕಥೆಗಳನ್ನು ಆರಿಸಿ, ಕತ್ತರಿಸಿ, ಅನುವಾದಿಸಿ ಅಥವಾ ಹಲವು ಮೂಲಗಳಿಂದ ಮೂಲಭೂತ ವಿಷಯಗಳನ್ನು ಕಲೆ ಹಾಕಿ ಹೆಚ್ಚು ಕಡಿಮೆ ಸ್ವತಂತ್ರ ಲೇಖನೆಗಳಾಗಿ ರೂಪಿಸಿ ಕೊಡುವುದು. ಅಂದರೆ ಸರಾಸರಿಯಲ್ಲಿ ಹೇಳುವುದಾದರೆ ನಮ್ಮಿಬ್ಬರ ನಡುವೆ–ಆ ಮೇಲೆ ಹೊಸ ಉಪಸಂಪಾದಕರನ್ನು ಬರಮಾಡಿಕೊಂಡ ನಂತರ ಮೂವರ ನಡುವೆ ದಿನಕ್ಕೊಂದು ಲೇಖನದ ಸಂಪಾದನೆ: ಬಹಳ ಸುಲಭವೆನಿಸುವ ಕೆಲಸ. ಆದರೆ ಲೇಖನಗಳಲ್ಲಿ ವೈವಿಧ್ಯ ತರಬೇಕಾದರೆ ಅವು ಕಾಲಾನುಸಾರಿ ಮತ್ತು ಆದಷ್ಟು ಶಾಶ್ವತ ಮೌಲ್ಯದವು ಎನಿಸಬೇಕಾದರೆ ಏನೇನೂ ಸುಲಭವಲ್ಲದ ಉದ್ಯೋಗ ಇದು. ಹೊರಗಿನಿಂದ ಬಂದ ಲೇಖನಗಳು ಸಂಖ್ಯೆಯಲ್ಲಿ ವಿಪುಲವಾಗಿದ್ದರೂ ನಮ್ಮ ಅಗತ್ಯಗಳನ್ನು, ಓದುಗರ ನಿರೀಕ್ಷೆಯನ್ನು ಸಮಾಧಾನಪಡಿಸಬಲ್ಲವೆಂದು ನಾವು ತಿಳಿದುಕೊಂಡ ಮಟ್ಟವನ್ನು ತಲುಪಬಲ್ಲವುಗಳು ಸಾಕಷ್ಟು ಇರುತ್ತಿರಲಿಲ್ಲ. ಹೆಚ್ಚಿನಂಶ ಕಚೇರಿಯಲ್ಲೇ ಸಿದ್ಧವಾಗಬೇಕು. ಇದಕ್ಕೆ ನಾಲ್ಕು ಭಾಷೆಗಳಲ್ಲಿ ರಾಶಿ ರಾಶಿ ಓದಿಕೆ ಆಗಬೇಕು. ಹೆಗಡೆಯವರೂ ನಾನೂ ಅಭಿರುಚಿಯಲ್ಲಿ ದುರಾರಾಧ್ಯರಾಗಿದ್ದುದರಿಂದ ಶ್ರಮ ಇನ್ನೂ ಅಧಿಕವಾಗುತ್ತಿತ್ತು. ವೈಜ್ಞಾನಿಕ ಮತ್ತು ಸಮಸಾಮಯಿಕ ವಿಷಯಗಳಲ್ಲಿ ಸಾಧ್ಯವಿದ್ದಷ್ಟು ಅದ್ಯ ಪರ್ಯಂತರ ಬೆಳವಣಿಗೆಗಳ ಮೇಲೆ ಕಣ್ಣಿಟ್ಟಿರಬೇಕಾಗಿತ್ತು. ಇಲ್ಲದಿದ್ದರೆ ಹೊರಗಿಂದ ಬಂದ ಲೇಖನಗಳ ಬಗ್ಗೆ ನಿರ್ಣಯವನ್ನು ಕೈಕೊಳ್ಳುವುದಾಗಲಿ ಅವುಗಳನ್ನು ತಕ್ಕ ಗಾತ್ರಕ್ಕೆ ಕತ್ತರಿಸಿ ಸಂಪಾದಿಸುವುದಾಗಲಿ ಸಾಧ್ಯವಿರಲಿಲ್ಲ. ಆರ್ಥಿಕ ಮತ್ತು ಇತರ ಕಾರಣಗಳಿಗಾಗಿ ಹೊರಗಿನಿಂದ ನಾನಾ

ಕಸ್ತೂರಿ –೮

ವಿಷಯಗಳ ಮೇಲೆ ಲೇಖನಗಳನ್ನು ಬರೆಸುವುದು ಈಗಿನಷ್ಟು ಅಗ್ಗ ಸುಲಭವಾಗಿರಲಿಲ್ಲ. ನಾವು "ಕಸ್ತೂರಿ"ಯ "ಮಟ್ಟ" ಎಂದು ಎಣಿಸಿಕೊಂಡ ಒಂದು ಅಳತೆಕೋಲನ್ನು ರೂಪಿಸಿಕೊಂಡ ನಂತರ ಅದನ್ನು ಕಾಯ್ದುಕೊಳ್ಳಬೇಕೆಂಬ ಹಂಬಲ ನಮಗೆ ಅಂಕುಶವಾಗಿರುತ್ತಿತ್ತು. ನಾವು ಸ್ವಲ್ಪ "ಢೀಲಾ" ಆದರೂ ಯಾವನಾದರೊಬ್ಬ ಚುರುಕು ಓದುಗ ತನ್ನ ಅಂಕುಶ ಹೆಟ್ಟಿ ನಮ್ಮನ್ನು ಎಚ್ಚರಿಸುತ್ತಿದ್ದ. ಇಂಥ ಓದುಗರನ್ನು ಪಡೆದದ್ದಕ್ಕೆ ನಮಗೆ ಹೆಮ್ಮೆಯೆನಿಸುತ್ತಿತ್ತು.

ಹೌದು, ಅದೀಗ ನನಗೆ ಹೆಚ್ಚು ಸಂತೋಷ ಕೊಟ್ಟ ಸಂಗತಿ. "ಕಸ್ತೂರಿ"ಯಿಂದ ಜನ ಒಂದು "ಮಟ್ಟ"ವನ್ನು ನಿರೀಕ್ಷಿಸುವಂತಾಯಿತಲ್ಲ! ಈ ಮಟ್ಟದ ಸುದ್ದಿ ಕರ್ನಾಟಕದಿಂದ ಹೊರಗೂ ತಕ್ಕಷ್ಟು ಹಬ್ಬಿತ್ತು. ಮರಾಠಿಯ ಪ್ರಖ್ಯಾತ ಸಾಹಿತಿಯೊಬ್ಬರು–ನನಗಂತೂ ಅಪರಿಚಿತರು–ಒಂದು ಭಾಷಣದಲ್ಲಿ ಮರಾಠಿಯಲ್ಲಿ "ಕಸ್ತೂರಿ"ಯಂಥ ಪತ್ರಿಕೆ ಯಾಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದರೆಂಬ ಒಂದು ಪತ್ರಿಕಾ ವರದಿಯ ತುಣುಕನ್ನು ಮುಂಬಯಿಯ ಕನ್ನಡಾಭಿಮಾನಿ ಶ್ರೀ ವರದರಾಜ ಆದ್ಯ ಅವರು ನಮಗೆ ಕಳಿಸಿದ್ದುಂಟು. ತೆಲುಗಿನಲ್ಲಿ ಒಂದು ಡೈಜೆಸ್ಟ್ ತೆಗೆಯಬಯಸಿದವರೊಬ್ಬರು ಸಲಹೆ ಕೇಳಲು ವಿಜಯವಾಡದಿಂದ ಹುಬ್ಬಳ್ಳಿಗೆ ಬಂದಿದ್ದರು. ಕರ್ನಾಟಕ – ಮಹಾರಾಷ್ಟ್ರ ಗಡಿ ಸಮಸ್ಯೆಯ ಹೊರ–ಬೊಬ್ಬೆ ಒಳ–ಕುದಿಗಳನ್ನು ಕುರಿತು "ಕಸ್ತೂರಿ"ಯಲ್ಲಿ ಪ್ರಕಟಿಸಿದ ಒಂದು ನಿಷ್ಪಕ್ಷಪಾತ ಲೇಖನವನ್ನು ಓದಿಸಿ ಕೇಳಿ ಇಷ್ಟು ಸ್ಪಷ್ಟವಾಗಿ ಸಮಸ್ಯೆಯನ್ನು ವಿಶ್ಲೇಷಿಸಿ ಮರಾಠಿಯಲ್ಲಿ ಯಾರೂ ಬರೆದಿಲ್ಲವೆಂಬು ಒಬ್ಬ ಮರಾಠಿ ಹಿರಿಯರು ಹೇಳಿದ್ದಾಗಿ ಓದುಗರೊಬ್ಬರು ಮುಂಬಯಿಯಿಂದ ಬರೆದರು. ಅನೇಕ ಲೇಖಕರು "ಕಸ್ತೂರಿ"ಯ ಮೇಲಿನ ಅಭಿಮಾನದಿಂದ ಅದು ಕೊಡುವ ಗೌರವಧನ ಅಲ್ಪವಾಗಿದ್ದರೂ ಲೇಖನಗಳನ್ನು ಬರೆದುಕೊಟ್ಟು ನನ್ನನ್ನು ಋಣಿಯಾಗಿ ಮಾಡಿದ್ದಾರೆ. ಮುಂಬಯಿಯ ಡಾ. ಶ್ರೀನಿವಾಸ ಹಾವನೂರ, ಈಗ ಮೈಸೂರಿನಲ್ಲಿರುವ ಶ್ರೀ ಜಿ. ಟಿ. ನಾರಾಯಣರಾವ್, ಉಡುಪಿಯ ಪ್ರೊ. ಕು.ಶಿ. ಹರಿದಾಸ ಭಟ್ಟರೇ ಮೊದಲಾದವರು ಇಂಥವರಲ್ಲಿ ಸೇರಿದ್ದಾರೆ.

ಕಚೇರಿಯಲ್ಲಿಯೂ ನನ್ನ ಕೆಲಸಕ್ಕೆ ಮನ್ನಣೆ ಸಿಕ್ಕಿತ್ತು. ಪ್ರಾರಂಭದಿಂದ ನಾನು ಸಂಪಾದಕನಾಗಿದ್ದರೂ ನಮ್ಮ ಕಚೇರಿಯ ಸಂಪ್ರದಾಯದಂತೆ ಸಂಪಾದಕನೆಂದು ನನ್ನ ಹೆಸರಿರಲಿಲ್ಲ. ಮುಂದೆ ಡಾ. ದಿವಾಕರರಿಂದಲೇ ಮೊದಲು 'ಸಹಾಯಕ ಸಂಪಾದಕ'ನೆಂದು ಅನಂತರ 'ಸಹ ಸಂಪಾದಕ'ನೆಂದು ನನ್ನ ಹೆಸರು ಅಚ್ಚು ಮಾಡುವ ಸೂಚನೆ –ನಾನು ಕೇಳದೆಯೆ – ಬಂತೆಂಬುದನ್ನು ಸ್ಮರಿಸಬೇಕು. ದಿವಾಕರರು ಹಾಜರಿದ್ದ ಯಾವುದೇ ಕೂಟದಲ್ಲಿ ಹೊರಗಿನಿಂದ ಬಂದ ದೊಡ್ಡವರಿಗೆ ನನ್ನನ್ನು ಪ್ರತ್ಯೇಕವಾಗಿ ಪ್ರಶಂಸಾಪೂರ್ವಕವಾಗಿ ಪರಿಚಯ ಮಾಡಿಕೊಡಲು ಅವರು ತಪ್ಪುತ್ತಿರಲಿಲ್ಲ. ಸಾಹಿತಿಗಳ ಮತ್ತು ಪತ್ರಿಕೋದ್ಯಮಿಗಳ ವರ್ಗದಲ್ಲಿ ನನಗೆ "ಕಸ್ತೂರಿ"ಯಿಂದಾಗಿ ತಕ್ಕಷ್ಟು ಹೆಸರೂ ಬಂತು. ಅಪಾರವಾದ ಅಭಿಮಾನಿಗಳು ಕನ್ನಡ ಓದುಗರಲ್ಲಿ ನನಗಿದ್ದರೆಂಬುದು ನನ್ನ ನಿವೃತ್ತಿಯ ನಂತರ ಪ್ರೊ. ಗೋಪಾಲಕೃಷ್ಣ ಅಡಿಗರ ಪ್ರೇರಣೆ ಮತ್ತು ಶ್ರೀ ಜಿ.ಜಿ.ನಾರಾಯಣರಾಯರ ಪರಿಶ್ರಮದಿಂದ ಮೈಸೂರಲ್ಲಿ ನನಗೊಂದು ಸನ್ಮಾನ ಏರ್ಪಟ್ಟಾಗ ಅದಕ್ಕೆ ಅಸಂಖ್ಯಾತ ಅಭಿಮಾನಿಗಳಿಂದ ಬಂದ ಪ್ರತಿಕ್ರಿಯೆಯಿಂದ ನನ್ನ ಪ್ರತೀತಿಗೆ ಬಂತು. ಇದಕ್ಕಿಂತ ಹೆಚ್ಚಿನ ಸಾರ್ಥಕ್ಯ ದುಡಿದವನಿಗೆ ಏನಿದ್ದೀತು?

ಆದರೂ "ಕಸ್ತೂರಿ"ಯ ವ್ಯಾವಹಾರಿಕ ಯಶಸ್ಸಿನಲ್ಲಿ ನಾನು ಮಹಾಮಾಂಸಕ್ಕೆ (lion's share) ಅರ್ಹನೆಂದು ನಾನು ಹೇಳಿಕೊಳ್ಳಲಾರೆ. ಬರುವುದೇನುಂಟೊ ಅದು ಬರುವ ಕಾಲಕ್ಕೆ ಬಂದರೆ ತಟ್ಟನೆ ಸಫಲವಾಗುತ್ತದೆ. ಡೈಜೆಸ್ಟಿಗೆ ಕಾಲ ಪಕ್ವವಾಗಿದ್ದಾಗ ಅದು ಬಂತು. ಅದರೊಡನೆಯೇ ತಲೆಯೆತ್ತಿದ ಅಂಥ ಇತರ ಪತ್ರಿಕೆಗಳು ಬೇರೆ ಕಾರಣಗಳಿಗಾಗಿ ಬಹುಕಾಲ ಮುಂದುವರಿಯಲಿಲ್ಲವಾಗಿ "ಕಸ್ತೂರಿ"ಗೆ ಕ್ಷೇತ್ರ ತೆರವಾಗಿತ್ತು. ಹೊಸ ರೀತಿಯ ಪತ್ರಿಕೆಗಳಿಗೆ ಯಾವಾಗಲೂ ಬಗಲುಮುಳ್ಳಾಗಿರುವ ಆರ್ಥಿಕ ಅಸ್ಥಿರತೆಯ ಭಯವಿಲ್ಲದೆ ಸಂಪಾದಕನಿಗೆ ನಿಶ್ಚಿಂತೆಯಿಂದ ಕೆಲಸ ಮಾಡುವ ಅವಕಾಶ ದೊರೆತದ್ದೂ ಇಲ್ಲಿ ಕಾರಕವಾಗಿತ್ತೆನ್ನಬೇಕು. ಆದರೂ "ಕಸ್ತೂರಿ" ಕನ್ನಡ ಓದುಗರಲ್ಲಿ ಹೊಸ

ಕಸ್ತೂರಿ - 6

ತೊಂದು ಅಭಿರುಚಿಯನ್ನು ಬೆಳೆಸಲು ಸಹಾಯ ಮಾಡಿತು. ಕಥೆಗಳಲ್ಲದೆ ಬೇರೆ ವೈಜ್ಞಾನಿಕ, ತಾಂತ್ರಿಕ ವಿಷಯಗಳಲ್ಲಿ, ದೈನಂದಿನ ರಾಜಕಾರಣದ ಬಾಯಿಚರ್ಪಿಗಿಂತ ಬೇರೆಯಾದ ರಾಜಕೀಯ-ಸಾಮಾಜಿಕ ವಿಶ್ಲೇಷಣೆಗಳನ್ನು ಜನಕ್ಕೆ ತಿಳಿಯುವ ರೀತಿಯಲ್ಲಿ ಬರೆದು ಹೊಸ ಹಾದಿ ತುಳಿಯಿತು. ಇದಕ್ಕೆ ನಾನು ಮುಖಿಯಾದೆ ಎಂದು ಹೇಳಿಕೊಳ್ಳುವುದಾದರೆ ಹೇಳಿಕೊಳ್ಳಬಹುದು. ಇದು ಕೂಡ ತ್ವರಿತ ಓದು, ತ್ವರಿತ ನಿರ್ಣಯ, ತ್ವರಿತ ಬರವಣಿಗೆಗಳಿಂದ ದಿವಂಗತ ಹೆಗಡೆಯವರು ನನ್ನ ನೆರವಿಗಿದ್ದದ್ದರಿಂದ ಸಾಧ್ಯವಾಯಿತೆಂದು ನಾನು ಬಲ್ಲೆ. ಅವರು ನಿವೃತ್ತರಾದ ಮೇಲೆ ನನ್ನ ಭಾರ ಹೆಚ್ಚಿತು, ಆದರೆ ಶ್ರೀ ಮಾಧವ ಮಹಿಷಿಯವರು ನನ್ನೊಡನೆ ದುಡಿಯಲು "ಕರ್ಮವೀರ"ದಿಂದ ವರ್ಗಾಯಿಸಲ್ಪಟ್ಟ ಮೇಲೆ ಪರಿಸ್ಥಿತಿ ಸುಧಾರಿಸಿತು.

ನನ್ನ ದೃಷ್ಟಿಯಲ್ಲಿ "ಕಸ್ತೂರಿ" ಬರೇ ವ್ಯಾವಹಾರಿಕ ಯಶಸ್ಸಿನ ಆರಾಧನೆ ಮಾಡಲಿಲ್ಲ. ಸಮಾಜಕ್ಕೆ ಬರೇ ಮನೋವಿನೋದನೆಗಿಂತ ಬೇರೆ ಮತ್ತು ಹೆಚ್ಚಿನ ಪ್ರಯೋಜನ ಕೊಡಬೇಕೆಂಬುದು ಅದರ ಉದ್ದೇಶವಾಗಿತ್ತು. ಅಜ್ಞಾತ ಯೋಗ್ಯತೆಗಳನ್ನು ಬೆಳಕಿಗೆ ತರುವುದು, ಪೂಜ್ಯ ಪೂಜೆಗೆ ಹಿಂಜರಿಯದಿರುವುದು, ವ್ಯಾವಹಾರಿಕವಾಗಿಯೂ ಓದುಗರ ಸಮಸ್ಯೆಗಳನ್ನು ಬಿಡಿಸಲು ನೆರವಾಗುವುದು ಇವು "ಕಸ್ತೂರಿ"ಯ ಕೆಲ ಆದರ್ಶಗಳಾಗಿದ್ದವು. ಪ್ರಕಟಿಸುವ ವಿಷಯಗಳ ಸತ್ಯಾಸತ್ಯತೆಯನ್ನು ಸಾಧ್ಯವಿದ್ದಷ್ಟು ಸ್ಥಿರಪಡಿಸಿಕೊಳ್ಳಲು ನಾವು ತುಂಬಾ ತೊಂದರೆ ತೆಗೆದುಕೊಳ್ಳುತ್ತಿದ್ದೆವು. ನಾವು ಪ್ರಕಟಿಸಿದ ಲೇಖನಗಳಿಂದ ಓದುಗರಲ್ಲಿ ಉದ್ಭವಿಸುತ್ತಿದ್ದ ಸಂಶಯಗಳನ್ನು ನಿವಾರಿಸಲು ಪತ್ರಮುಖೇನವೂ ನೆರವಾಗುತ್ತಿದ್ದೆವು. ಇಂಥ ಒಂದು ಸನ್ನಿವೇಶವನ್ನು ಉಲ್ಲೇಖಿಸಿ ಈ ಲೇಖನ ಮುಗಿಸುತ್ತೇನೆ. ಸಂತತಿ ನಿಯಂತ್ರಣ ಶಸ್ತ್ರಕ್ರಿಯೆಗೆ ಸಂಬಂಧಿಸಿ ನಾವೊಂದು ಲೇಖನ ಪ್ರಕಟಿಸಿದ್ದೆವು. ಎರಡು ಮಕ್ಕಳು ಸಾಕೆಂದು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಮೇಲೆ ಏಕಮಾತ್ರ ಗಂಡು ಮಗು ಅಂಗಹೀನವಾಗುವ ದೌರ್ಭಾಗ್ಯಕ್ಕೆ ಒಳಗಾದ ಓದುಗರೊಬ್ಬರು ಆ ಲೇಖ ಓದಿ ನಮಗೆ ಆರ್ತರಾಗಿ ಬರೆದರು. ನಾವು ಶಸ್ತ್ರಕ್ರಿಯಾ ತಜ್ಞರನ್ನು ಕೇಳಿ ಹೊಸದಾಗಿ ರೂಪಿಸಲಾಗಿದ್ದ ವೀರ್ಯನಾಳದ ಪುನರ್ಜೋಡಣೆಯ ವಿವರಗಳನ್ನು ಪಡೆದು ಆ ಓದುಗರಿಗೆ ತಿಳಿಸಿದೆವು. ಆ ಪ್ರಕಾರ ತಾವು ಸರ್ಜನ್ನರಿಂದ ಪುನರ್ಜೋಡಣೆಯ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಮಗುವನ್ನು ಪಡೆದುದಾಗಿ ಕೃತಜ್ಞತಾಪೂರ್ವಕ ನಮಗೆ ಬರೆದರು. "ಕಸ್ತೂರಿ"ಯ ಇಂಥ ಸಾಧನೆ ನನಗೆ ಮಿಕ್ಕೆಲ್ಲವುಗಳಿಂದ ಸ್ಮರಣೀಯವಾಗಿ ಕಂಡಿದೆ.

೧೯೫೬ ರಿಂದ ೧೯೭೪ ಕೊನೆಯ ವರೆಗೆ "ಕಸ್ತೂರಿ"ಗಾಗಿ ದುಡಿದು ತೀವ್ರ ಅಸ್ವಾಸ್ಥ್ಯದ ನಂತರ ನಾನು ನಿವೃತ್ತನಾದೆ. ನಾನು ಆಸ್ಪತ್ರೆಯಲ್ಲಿ ಮಲಗಿದ್ದಾಗ ಅಸಂಖ್ಯ ಓದುಗರು ನನ್ನನ್ನು ಕಾಣಬಂದದ್ದೂ ಆಸ್ಪತ್ರೆಯ ವೈದ್ಯರು ನನ್ನ ಯೋಗಕ್ಷೇಮದಲ್ಲಿ ಅಸಾಧಾರಣ ಆಸಕ್ತಿ ವಹಿಸಿದ್ದೂ "ಕಸ್ತೂರಿ"ಯ ದಾಯವೆಂದೇ ನಾನು ಭಾವಿಸಿದ್ದೇನೆ. ✱

ಅರಿಕೆ

□ ಪುಟಗಳ ಮಿತಿಯಿಂದಾಗಿ ಕೆಲವು ಆಮಂತ್ರಿತ ಲೇಖನಗಳನ್ನು ಮುಂದಿನ ಸಂಚಿಕೆಗೆ ಉಳಿಸಿಕೊಳ್ಳಬೇಕಾಯಿತು. ಅದಕ್ಕಾಗಿ ಆ ಎಲ್ಲ ಲೇಖಕ ಮಹನೀಯರ ಮತ್ತು ಆಸಕ್ತ ಓದುಗರ ಕ್ಷಮೆ ಕೋರುತ್ತೇವೆ.

□ ಈ ಸಂಚಿಕೆಯ ಪುಸ್ತಕ ವಿಭಾಗದಲ್ಲಿ ಬಂದ ಚೀನಿ ಕಿರು ಕಾದಂಬರಿಯನ್ನು 'ಕಸ್ತೂರಿ'ಗೆಂದು ಅನುವಾದಿಸಿಕೊಟ್ಟ ಶ್ರೀ ವೆಂಕಟರಾಜ ಪಾನಸೆಯವರು ಸಂಚಿಕೆ ಹೊರಬರುವ ಮುನ್ನವೇ ವಿಧಿವಶರಾದುದು ಶೋಚನೀಯ. ಮೃತರಿಗೆ ಚಿರಶಾಂತಿ ದೊರೆಯಲಿ. —ಸಂ.

ಬಡತನದ ಬೇಗೆಯಲ್ಲಿ ಬೆಂದವರು

— ಪಿ. ವಿ. ಆಚಾರ್ಯ.

ನಮ್ಮ ಬಡತನವನ್ನು ಕುರಿತು ನಾವೇ ಕೊಂಡಾಡಿಕೊಳ್ಳುವುದು ಅಷ್ಟು ಒಳ್ಳೆ ಅಭಿರುಚಿಯಲ್ಲ. ಅದು ಬಡತನವನ್ನೇ ಬಂಡವಾಳ ಮಾಡಿಕೊಳ್ಳುವ ಪ್ರಯತ್ನ ಅನಿಸಬಹುದು. ಇನ್ನೂ ಬಡತನದಲ್ಲೇ ನರಳುತ್ತಿರುವ ಮನುಷ್ಯ ತನ್ನ ಬಡತನವನ್ನು ಹೇಳಿಕೊಂಡರೆ ಜಗತ್ತು ಅದಕ್ಕೆ ಕಿವಿಗೊಡುವುದಿಲ್ಲ. ಅವನು ಕೂಡ ತನ್ನ ಬಡತನವನ್ನು ವಸ್ತುನಿಷ್ಠ ದೃಷ್ಟಿಯಿಂದ ನೋಡಲಾರ. ತನ್ನ ಬಗ್ಗೆ ಅನುಕಂಪವನ್ನು ಹುಟ್ಟಿಸಿಕೊಂಡು ಆದರಿಂದ ಏನಾದರೂ ಪ್ರಯೋಜನವನ್ನು ಗಿಟ್ಟಿಸುವ ಚಪಲವನ್ನು ತಪ್ಪಿಸಿಕೊಳ್ಳುವುದು ಬಡವನಿಗೆ ಕಷ್ಟ. ಇನ್ನು ಸ್ವಾಭಿಮಾನಿಯಾದ ಬಡವ ತನ್ನ ಬಡತನವನ್ನು ಕುರಿತು ಆಡಿಕೊಳ್ಳುವುದಕ್ಕೇ ಒಪ್ಪುವುದಿಲ್ಲ. ತನ್ನ ಖಾಸಗಿ ನೋವನ್ನು ಖಾಸಗಿಯಾಗಿಯೇ ಅವನು ಅನುಭವಿಸುತ್ತಾನೆ.

ಬಡತನದಲ್ಲಿದ್ದು ಅದರಿಂದ ಮೇಲೇರಿ ಹೊರಗೆ ಬಂದಾತ ತನ್ನ ಹಳೆ ಬಡತನವನ್ನು ರಸವತ್ತಾಗಿ ವರ್ಣಿಸಿಕೊಳ್ಳಲು ಇಷ್ಟಪಡಬಹುದು. ಇದನ್ನೇ ನಾನು ಒಳ್ಳೆ ಅಭಿರುಚಿಯಲ್ಲ ಅನ್ನುವುದು. ಯಾಕೆಂದರೆ ಇದರಲ್ಲಿ ಒಂದು ತರಹದ ದುರಭಿಮಾನ ಅಡಗಿರುತ್ತದೆ. From rags to riches (ಚಿಂದಿಯಿಂದ ಪೀತಾಂಬರಕ್ಕೆ ಏರಿದವರ) ~~ಫ್ರಂ ರ್‍ಯಾಗ್ಸ್ ಟು ರಿಚಸ್~~ ಕಥೆಗಳನ್ನು ನಾವು ಈ ಕಾಲದಲ್ಲಿ ಧಾರಾಳವಾಗಿ ಕೇಳುತ್ತೇವೆ. ಹೀಗೆ ಮೇಲೇರಿದವರು ತಮ್ಮನ್ನು ಸೆಲ್ಫ್ ಮೇಡ್ ಮ್ಯಾನ್ ಅಂದುಕೊಳ್ಳುತ್ತಾರೆ. ಇವರಲ್ಲಿ ಎಷ್ಟೋ ಜನರು ಪೀತಾಂಬರಕ್ಕೆ ~~ಚಿನ್ನಕ್ಕೆ~~ಏರುವುದು ಸಾವಿರಾರು ಜನರನ್ನು ~~ಚಿಂದಿ~~ ಚಿಂದಿಧಾರಿಗಳಾಗಿ ಮಾಡುವ ಮೂಲಕ. ಇನ್ನು ಕೆಲವರು ಕೇವಲ ಅದೃಷ್ಟಬಲದಿಂದ ಮೇಲೇರಿರುತ್ತಾರೆ. ಬಡತನದಿಂದ ಶ್ರೀಮಂತಿಕೆಗೇರಿದವನು ಸದಭಿರುಚಿಯುಳ್ಳವನಾಗಿದ್ದರೆ ಅವನು ತನ್ನ ಅತೀತವನ್ನು ಒಂದು ಎಚ್ಚರಿಕೆಯಾಗಿ ನೆನೆದುಕೊಳ್ಳಬಹುದೇ ಹೊರತು ಹೆಮ್ಮೆಯಿಂದ ನೆನೆದುಕೊಳ್ಳಲಾರ.

ಇನ್ನೊಂದು ವರ್ಗ ಬಡತನವನ್ನು [illegible] ಯಿಂದ ~~ನೋಡುತ್ತದೆ~~ ಕಾಣುತ್ತದೆ. ಅವರಿಗೆ ಬಡತನದಲ್ಲಿ ಏನೋ ಒಂದು ಆಕರ್ಷಕ [illegible] ತ್ತದೆ. ಇಂಥವರಲ್ಲಿ ಕೆಲವರು ಸಂಪತ್ತಿನಲ್ಲಿ ಹುಟ್ಟಿ ಅದನ್ನು ಬಿಟ್ಟು [illegible] ವನ್ನು ಸ್ವೀಕರಿಸುತ್ತಾರೆ. ಭರ್ತೃಹರಿ ಕವಿ ಇಂಥವರಲ್ಲಿ ಒಬ್ಬ. ಅವನು ವೈರಾಗ್ಯ [illegible] ದನ್ನು ಹೇಳಿ :

ವಯಮಿಹ ಪರಿತುಷ್ಟಾ ವಲ್ಕಲೈಃ ತ್ವಂ ದುಕೂಲೈಃ

ಸಮ ಇಹ ಪರಿತೋಷೋ ನಿರ್ವಿಶೇಷೋ ವಿಶೇಷಃ।

ಸ ತು ಭವತಿ ದರಿದ್ರೋ ಯಸ್ಯ ತೃಷ್ಣಾ ವಿಶಾಲಾ
ಮನಸಿ ಚ ಪರಿತುಷ್ಟೇ ಕೋऽರ್ಥವಾನ್ ಕೋ ದರಿದ್ರಃ ||

ಅಯ್ಯ ರಾಜಾ, ನಿನಗೆ ರೇಷ್ಮೆ ವಸ್ತ್ರ ಉಟ್ಟರೇ ಸಮಾಧಾನ; ನಮಗೆ ನಾರು ಮಡಿಯಿಂದಲೇ ತೃಪ್ತಿ. ತೃಪ್ತಿ ಎನ್ನುವುದು ಇಬ್ಬರಿಗೂ ಸಮಾನವೇ ಅಲ್ಲವೇ. ಹೀಗಿರುವಾಗ ಬಡವ ಅಂದರೆ ಯಾರು, ಬಲ್ಲಿದ ಅಂದರೆ ಯಾರು? ಯಾರಿಗೆ ಅತಿಯಾದ ಆಸೆಯುಂಟೋ ಅವನೇ ಬಡವ. ಮನಸ್ಸಿಗೆ ತೃಪ್ತಿ ಇದ್ದರೆ ಬಡವ ಬಲ್ಲಿದ ಎನ್ನುವುದು ಸುಳ್ಳು.

ಆಹಾ! ಎನ್ನುವಂಥಾ ಮಾತು, ನಿಜ. ಆದರೆ ಭರ್ತೃಹರಿ ಒಂದೊಮ್ಮೆ ರಾಜನಾಗಿದ್ದು ಆಮೇಲೆ ಸಂಪತ್ತಿನ ಭೋಗಗಳಲ್ಲಿ ಸಾರವನ್ನು ಕಾಣದೆ ಅದನ್ನು ಧಿಕ್ಕರಿಸಿ ವೈರಾಗಿಯಾದವನು. ಅವನ ಬಾಯಲ್ಲಿ ಇಂಥ ಮಾತು ಸೊಗಸಾಗಿ ಕಾಣಬಹುದು. ಬಡವನಾಗಿದ್ದು ಬಡವನಾಗಿಯೇ ಉಳಿದವನು ಇಂಥಾದ್ದನ್ನು ಹೇಳಿದರೆ ಅಭಾವ ವೈರಾಗ್ಯ ಎಂದು ನೀವೇ ಹೇಳುತ್ತೀರಿ. ಆದರೆ ಶ್ರೀಮಂತಿಕೆಯನ್ನು ತೊರೆದು ಬಡತನವನ್ನು ಸ್ವೀಕರಿಸುವವರಲ್ಲಿ ಒಂದು ತರಹದ ನೈಜತೆಯು ಅಭಾವ ಕಂಡು ಬರುತ್ತದೆ. ಸ್ವಯಂ ಸ್ವೀಕೃತವಾದ ಬಡತನ ಎಲ್ಲರಿಗೂ ಸಾಧ್ಯವೂ ಅಲ್ಲ, ಇಷ್ಟವೂ ಅಲ್ಲ.

ನನ್ನ ಅನುಭವದ ದೃಷ್ಟಿಯಿಂದ ಹೇಳುವುದಾದರೆ [illegible] ಇಲ್ಲ ಬರ್ನಾರ್ಡ್ ಷಾ ಟು ಬಿ ಪೂರ ಇಸ್ ಸಿನ್ ಎಂದಿದ್ದಾನೆ. ಅದೇ ಕಲ್ಪನೆಯನ್ನು ನಮ್ಮ ಪೂರ್ವಜರು ಪುನರ್ದರಿದ್ರ: ಪುನರೇವ ಪಾಪೀ — ಬಡತನದಿಂದ ಪಾಪ ಹುಟ್ಟುತ್ತದೆ. ಪಾಪದಿಂದ ಮತ್ತೆ ಬಡವನಾಗಿ ಮತ್ತೆ ಪಾಪವನ್ನೇ ಮಾಡುತ್ತಾನೆ ಮನುಷ್ಯ, ಎಂದು ಹೇಳಿದ್ದಾರೆ. ಬಡತನ ಮನುಷ್ಯನಿಗೆ ಏನು ಮಾಡುತ್ತದೆ ಎನ್ನುವುದನ್ನು ಶೂದ್ರಕ ಕವಿ ಮೃಚ್ಛಕಟಿಕ ನಾಟಕದಲ್ಲಿ ದರಿದ್ರ ಚಾರುದತ್ತನ ಬಾಯಿಯಿಂದ ಹೇಳಿಸಿದ್ದು ನನಗೆ ಎಲ್ಲಕ್ಕಿಂತಲೂ ಹೆಚ್ಚು ಮನಸ್ಸಿಗೆ ನಾಟಿದೆ. [illegible] ಶಾಸ್ತ್ರಿಗಳ ಅನುವಾದದಲ್ಲಿ ಅದು ಹೀಗೆ ಬರುತ್ತದೆ :

ಬಡತನದಿಂದೆ ನಾಣ್ ಅಹುದು,
ನಾಣ್ ಬಿಡೆ ಪೋಪುದು ದೀಪ್ತಿ,
ದೀಪ್ತಿಯುಂ ಬಿಡೆ ಅವಮಾನವಪ್ಪುದು,
ಅವಮಾನದಿಂದಾಗೆ ವಿರಕ್ತಿಯುಂಬಡುತೆ ಒಡನ್ ಅಳಲ್ವನ್
ಅಳಲಿಂ ಮತಿ ಪೋಪುದು
ಬುದ್ಧಿನಾಶದಿಂ ಕಡೆಗೆ ಅಳಿವನ್

ಬಡತನದ ಸರಪಳಿ ಕ್ರಿಯೆಯನ್ನು ಕುರಿತ ಶೂದ್ರಕ ಕವಿಯ ಈ ವಿವೇಚನೆಯನ್ನು ಬಹುಶಃ ನಾನು ನನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಮೊದಲು ಓದಿರಬೇಕು. ಅದು ಇಂದಿಗೂ ಅಚ್ಚಳಿಯದೆ ಮನಸ್ಸಿನಲ್ಲಿ ನಿಂತುಬಿಟ್ಟಿದೆ. ಯಾಕಂದರೆ ಅದು ಅಷ್ಟು ಮಟ್ಟಿಗೆ ಅನುಭವ ಸಾಮ್ಯವನ್ನು ಹೊಂದಿದೆ. ಬಡತನದಲ್ಲಿರುವ ಮುಖ್ಯ ಆತಂಕ ಶಾರೀರಿಕವಲ್ಲ, ಮಾನಸಿಕ. ಅದು ಆತ್ಮವನ್ನು ಕೊಲ್ಲುತ್ತದೆ.

91-2

ಬಡತನ ನನಗೇನು ಮಾಡಿತು ಅಂತ ಮೇಲಿನ ವಿವೇಚನೆಯ ದೃಷ್ಟಿಯಿಂದಲೇ ಈಗ ಹೇಳುತ್ತೇನೆ. ನನ್ನ ತಂದೆ ನನ್ನ ಐದನೇ ವಯಸ್ಸಿನಲ್ಲಿ ತೀರಿಕೊಂಡಾಗ ನಮ್ಮ ಮನೆಯ ಖಜಾನೆಯಲ್ಲಿ ಇದ್ದ ನಗದಿ ಒಂದು ರೂಪಾಯಿ ಮಾತ್ರ ಅಂತ ನನ್ನ ತಾಯಿ ಹೇಳುತ್ತಿದ್ದರು. ನಮಗೆ ಒಂದು ಚೂರು ಆಸ್ತಿಯೂ ಇರಲಿಲ್ಲ. ನನ್ನ ತಂದೆ ತಮ್ಮ ಕಾಲದಲ್ಲಿ ಧಾರಾಳವಾಗಿ ಧನ ಸಂಪಾದನೆ ಮಾಡಿದ್ದರಂತೆ. ಆದರೆ ಉಳಿಸುವುದರಲ್ಲಿ ಅವರಿಗೆ ನಿಗಾ ಇರಲಿಲ್ಲ. ಬಹುಶಃ ತಾವು ನಿರಂತರವಾಗಿ ಹೀಗೇ ದುಡಿಯುತ್ತಾ ಇರುತ್ತೇವೆಂದು ಅವರು ನೆನಸಿರಬಹುದು. ಸಾವು ಅವರನ್ನು ತೆಗೆದುಕೊಂಡು ಹೋದಾಗ ನನ್ನ ತಾಯಿಯ ಮೇಲೆ ಇನ್ನೂ ಮದುವೆಯಾಗದ ಒಬ್ಬ ಮಗಳು ಮತ್ತು ನನ್ನ ಹೊಣೆ ಬಿತ್ತು.

ಬಡವರಾಗಿರುವುದೇ ಕೆಟ್ಟ. ನನಗೆ ತೀರ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಳ್ಳುವ ಎರಡನೆಯ ದುರ್ಭಾಗ್ಯವೂ ಸೇರಿಕೊಂಡಿತ್ತು. ತಂದೆಯನ್ನು ಹೊಂದಿರುವುದರ ಬೆಲೆ ತಂದೆಯನ್ನು ಕಳೆದುಕೊಂಡವರಿಗೇ ಗೊತ್ತು. ತಂದೆ ಎಂಥವನೇ ಆದರೂ ಅವನು ಮಗುವಿನ ಮನಸ್ಸಿಗೆ ಒಂದು ಭದ್ರತೆಯ ಆಧಾರಸ್ತಂಭವಾಗಿರುತ್ತಾನೆ. ಈ ಫಾದರ್ ಫಿಗರಿನ ಅಭಾವದಲ್ಲಿ ಮಗು ಚುಕ್ಕಾಣಿಯಿಲ್ಲದ ದೋಣಿಯಂತೆ, ಲಂಗರಿಲ್ಲದ ಹಡಗಿನಂತೆ ಬದುಕಿನ ಅಜ್ಞಾತ ಸಾಗರದಲ್ಲಿ ತೊಳಲಾಡಬೇಕಾಗುತ್ತದೆ. ತಂದೆಯ ಅಭಾವದಲ್ಲಿ ಅಂದು ನನ್ನ ಮನಸ್ಸಿನಲ್ಲಿ ಬೇರೂರಿದ ಅರಕ್ಷಿತ ಭಾವ ಇಂದಿಗೂ ಉಳಿದುಕೊಂಡಿದೆ. ಅದು ನನ್ನ ಬಡತನದ ಭಾವಕ್ಕೆ ಬದಲಿಸಲಾರದ ಒಂದು [illegible].

ಈ ಎರಡು ದುರದೃಷ್ಟಗಳ ಸಂಗಡ ನಾನು ಮೂರನೇ ಮತ್ತು ನಾಲ್ಕನೇ ವಿಶೇಷ ದುರದೃಷ್ಟಗಳಿಗೆ ಒಳಗಾಗಿದ್ದೆ. ಅವೆಂದರೆ [illegible] ಬುದ್ಧಿಶಕ್ತಿ ಮತ್ತು ಚಿಕ್ಕಂದಿನಿಂದಲೂ [illegible] ಸೂಕ್ಷ್ಮ ಮನಸ್ಸು. ನಿಮ್ಮ ದುರವಸ್ಥೆಯನ್ನು ಅರ್ಥ ಮಾಡಿಕೊಳ್ಳಲಾರದಷ್ಟು ನೀವು ಮೂಢರಾಗಿದ್ದರೆ ಬಡತನ ನಿಮ್ಮನ್ನು ಹೆಚ್ಚು ನೋಯಿಸಲಾರದು. ನಮ್ಮ ದೇಶದ ಕೋಟ್ಯಂತರ ಬಡವರಲ್ಲಿ ಅನೇಕರು ಬದುಕಿರುವುದು ಹೀಗೆ. ~~ಬಡತನ — ಅಂದರೆ ಅಜ್ಞಾನದ ಫಲವಾದ.~~ ತಮ್ಮ ಅವಸ್ಥೆ ಇದಕ್ಕಿಂತ ಭಿನ್ನವಾಗಿರಲು ಸಾಧ್ಯವಿತ್ತು ಎನ್ನುವುದೇ ಅವರಿಗೆ ತಿಳಿದಿರುವುದಿಲ್ಲ. ಅಥವಾ ನಿಮ್ಮ ಚರ್ಮ ಖಡ್ಗಮೃಗದ ಚರ್ಮದಂತೆ ದಪ್ಪವಾಗಿದ್ದರೆ ಬಡತನದೊಡನೆ ಬರುವ ಅವಮಾನಗಳನ್ನು ದುರ್ಲಕ್ಷಿಸಲು ಸುಲಭವಾಗಬಹುದು. ನನ್ನ, ಅಂದರೆ ನನ್ನ ಮನಸ್ಸಿನ, ಚರ್ಮ ಬಲು ಮೃದುವಾಗಿತ್ತು. ಅದು ತನಗೆ ಒದಗಿದ ಪ್ರತಿಯೊಂದು ಆಘಾತ ಘಟನೆಯನ್ನೂ ಇದ್ದದ್ದಕ್ಕಿಂತಲೂ ದೊಡ್ಡದು ಮಾಡಿ ಶಾಶ್ವತವಾಗಿ ದಾಖಲೆ ಮಾಡಿಕೊಂಡು ಬಿಡುತ್ತಿತ್ತು.

ನನ್ನ ನೆನಪಿನ ಜಾಡು ಹಿಡಿದು ಎಷ್ಟು ಹಿಂದಕ್ಕೆ ಹೋದರೂ ಅಲ್ಲಿ ನನಗೆ ಒದಗಿದ ಪ್ರತಿಯೊಂದು ಅತ್ಯಲ್ಪ ಕ್ಲೇಶ, ಅಪಮಾನದ ಸನ್ನಿವೇಶಗಳು ಅಚ್ಚಳಿಯದಂತೆ ಜಾಗೃತವಾಗಿ ಉಳಿದುಕೊಂಡಿರುವುದು ನನಗೇ ಆಶ್ಚರ್ಯವನ್ನುಂಟು ಮಾಡಿದೆ. ಉದಾಹರಣೆಗೆ, ನನ್ನ ಏಳನೇ ವಯಸ್ಸಿನಲ್ಲಿ ಊಟ ಮಾಡುವಾಗೊಂದು ರಾತ್ರಿ ಸಾರು ಸ್ವಲ್ಪ ಖಾರ ಎನಿಸಿದ್ದರಿಂದ ಅಂಜುತ್ತ ಅಂಜುತ್ತ ಎಣ್ಣೆ ಬೇಕು ಎಂದು ಕೇಳಿದೆ. ಆಗ ಅಲ್ಲಿದ್ದವರೊಬ್ಬರು ಸ್ವಲ್ಪ ವ್ಯಂಗ್ಯವಾಗಿ, " ಆಚಾರಿಗೆ ಎಣ್ಣೆ ಬೇಕಾಗಿತ್ತೋ? " ಎಂದು ಹೀಗಳೆದರು. ಎಣ್ಣೆ ಬಂತು, ನಾನು ಉಂಡೆ ಎಲ್ಲಾ ಸರಿ.

9W - 3

ಆದರೆ ಈ ಕ್ಷುದ್ರ ಸನ್ನಿವೇಶ, ಇಂದು ಅರವತ್ತನೇ ವಯಸ್ಸಿನಲ್ಲಿ ಕೂಡ, ನನ್ನದೇ ಮನೆಯಲ್ಲಿ ನನ್ನ ಹೆಂಡತಿಯಿಂದಲೇ ಸಾರಿಗೆ ಉಪ್ಪು ಬೇಕೆಂದು ಕೇಳುವಾಗ, ನನಗೆ ಥಟ್ಟನೆ ನೆನಪಿಗೆ ಬಂದುಬಿಡುತ್ತದೆ. ಮತ್ತು ಒಂದು ಅನಿರ್ವಚನೀಯ ತಳಮಳವನ್ನು ಉಂಟುಮಾಡುತ್ತದೆ. ಬಡತನದ ಮತ್ತು ಅರಕ್ಷಿತತ್ವದ ಪ್ರಶ್ನೆ ಹೃದಯದಲ್ಲಿ ಆಳವಾಗಿ ಮನನ ಮಾಡದಲ್ಲದೆ ನೋಡಿದರೆ ಇದು ಸಾಧ್ಯವೇ ಇರಲಿಲ್ಲ ಎಷ್ಟು ಮಕ್ಕಳಿಗೆ ತಾಯಿಯೋ ತಂದೆಯೋ ಊಟದ ವೇಳೆ ಇಂಥ ಮಾತನ್ನು ಹೇಳಿರಲಿಕ್ಕಿಲ್ಲ? ನನಗೊಬ್ಬನಿಗೇ ಇದು ನೆನಪಿನಲ್ಲಿ ಉಳಿದು ಬಿಡಬೇಕೆಂದರೆ!

ಬಹುಶಃ ಈ ಒಂದು ಸನ್ನಿವೇಶವೇ ನನ್ನನ್ನು ಮುಖ ಹೇಡಿಯಾಗಿ ಮಾಡಿರಬೇಕು. ಚಾರುದತ್ತ ಹೇಳುತ್ತಾನಲ್ಲ — ಬಡತನದಿಂದೆ ನಾಣ್ ಅಹುದು, ನಾಣ್ ಬರೆ ಪೋಪುದು ದೀಪ್ತಿ. ಒಳಗೊಳಗೇ ಮುದುಡಿಕೊಳ್ಳುವ ಪ್ರವೃತ್ತಿಯಿಂದಾಗಿ ಯಾರಿಂದಲಾದರೂ ಏನಾದರೂ ಸಹಾಯವನ್ನು ಕೇಳಬೇಕಾದರೆ ನನಗೆ ಜೀವ ಸತ್ತು ಉಳಿ ಬಂದಂತಾಗುತ್ತದೆ. ಇದನ್ನು ಅಭಿಮಾನ ಎಂದು ಹೇಳಿಕೊಳ್ಳುವುದು ಸರಿಯಾಗದು. ಅವರು ಕೊಡುವುದಿಲ್ಲ ಅಂದರೆ, ಅಥವಾ ಏನಾದರೂ ಸಣ್ಣ ಮಾತು ಹೇಳಿದರೆ? ಎಂಬ ಅಳ್ಳೆದೆ ಯಾವ ಕೆಲಸದಲ್ಲೂ ಮುಂದೆ ಬಿದ್ದು ಹೋಗದಂತೆ ನನ್ನನ್ನು ತಡೆಯುತ್ತ ಬಂದಿದೆ. ಜೀವಮಾನವೆಲ್ಲ ನನಗೆ ಅನ್ಯರಿಂದ ಸ[illegible]ಲ್ಲಿ ಒಳ್ಳೆಯವರು ಧಾರಾಳವಾಗಿದ್ದರೆ, ಬಡವರನ್ನು ಸಮಾನಿಕರಂತೆ [illegible] ಮಂದಿಯೂ ಇದ್ದಾರೆ ಎಂದು ದೀರ್ಘ ಅನುಭವದಿಂದ ನನಗೆ ಈಗ ಮನವರಿಕೆಯಾಗಿದೆ. ಆದರೆ ಯಾವ ಕೆಲಸಕ್ಕಾದರೂ ಯಾರನ್ನಾದರೂ ಕೇಳಬೇಕು ಎನ್ನುವಾಗ ನನ್ನ ಮನಸ್ಸಿಗೆ ಮೊದಲು ಬರುವುದು 'ಬೇಡ' ಎನ್ನುವ ಪ್ರೇರಣೆ. ಇದು ಮನುಷ್ಯನ ಪ್ರಗತಿಗೆ ಬರಬಾರದಾದ ಅತಿ ದೊಡ್ಡ ತೊಡಕು. ಸೂಕ್ಷ್ಮ ಸಂವೇದಿಯಾದ ಮನುಷ್ಯನನ್ನು ಬಡತನದ ಅನುಭವ ಅಸಂಖ್ಯ [illegible] ಗಳಿಂದ ಸಜ್ಜಿತನನ್ನಾಗಿ ಮಾಡಿ ಅವನ ಎಂಜಿನನ್ನು ನಿಷ್ಕ್ರಿಯವಾಗಿ ಮಾಡಿಬಿಡಬಹುದು.

ನನ್ನ ತಾಯಿಯ ಅಕ್ಕ ನಮ್ಮ ಈ ಕಷ್ಟಕಾಲದಲ್ಲಿ ನಮ್ಮ ನೆರವಿಗೆ ಬಂದಿರದಿದ್ದರೆ ನಾನು ಮಲೆನಾಡಿನ ಯಾವುದೋ ಕೊಂಪೆಯಲ್ಲಿ ಬಹುಶಃ ನಿಕೃಷ್ಟವಾದ ಬದುಕನ್ನು ಬಾಳಬೇಕಾಗಿ ಬರುತ್ತಿತ್ತು. ಅವರು ತಮ್ಮ ಸ್ತ್ರೀಧನದ 1000 ರೂಪಾಯಿಗಳನ್ನು ನನ್ನ ತಾಯಿಗೆ ಕೊಟ್ಟರು. ಅದರ ಬಡ್ಡಿ ತಿಂಗಳಿಗೆ ಆರೆಂಟು ರೂಪಾಯಿಗಳು ಬರತೊಡಗಿದ್ದರಿಂದ ನಮ್ಮ ತಾಯಿ ಉಡುಪಿಗೆ ಬಂದು ನೆಲಸಲು ಸಾಧ್ಯವಾಯಿತು. ನಾನು ಪ್ರೈಮರಿ ಶಾಲೆಯನ್ನು ಸೇರಿದೆ. ಆದರೆ ನಮ್ಮ ಆದಾಯ ಜೀವನ ನಿರ್ವಾಹಕ್ಕೆ ಏನೇನೂ ಸಾಲುತ್ತಿರಲಿಲ್ಲ. ನಮ್ಮ ತಾಯಿ ಅನೇಕ ದಿನ ನಮ್ಮ ಸಲುವಾಗಿ ಅರೆಹೊಟ್ಟೆಯಲ್ಲಿ ಉಳಿದಿರಬೇಕು. ನನಗೋ ಒಂದು ಅಂಗಿ ಒಂದು ಚಡ್ಡಿಯ ಮೇಲೆ ವರ್ಷಗಟ್ಟಲೆ ಕಳೆಯುವುದು; ವಾರಕ್ಕೊಮ್ಮೆ ಅವುಗಳನ್ನು ಹಳ್ಳಕ್ಕೊಯ್ದು ಒಗೆದು ಹಾಕಬೇಕಾದರೆ ಕೌಪೀನವೇ ಗತಿ.

ನನ್ನ ವಿದ್ಯಾರ್ಥಿದೆಸೆಯ ಅನೇಕ ಘಟನೆಗಳು ಈಗಲೂ ನನಗೆ ದುಃಸ್ವಪ್ನಗಳಾಗಿವೆ. ಆಗ ಪ್ರೈಮರಿ ಶಾಲೆಗಳಲ್ಲಿ ಕೂಡ ಮೇಲ್ಜಾತಿಯವರಿಗೆ ಫೀ ಮಾಫ್ ಇರಲಿಲ್ಲ. ನಾನು ಐದನೇ ಕ್ಲಾಸಿನಲ್ಲಿ ಓದುತ್ತಿದ್ದಾಗ ತಿಂಗಳ ಫೀ ಎಂಟಾಣೆಯನ್ನು ಒದಗಿಸಲು ಒಂದು ಸಲ ನನ್ನ ತಾಯಿಗೆ ಸಾಧ್ಯವಾಗಲಿಲ್ಲ.

W-4

ನಾನು ಕ್ಲಾಸಿನಲ್ಲಿ ಉತ್ತಮ ವಿದ್ಯಾರ್ಥಿ ಎನಿಸಿದ್ದರೂ "ನಾಳೆ ಫೀ ತಾರದಿದ್ದರೆ ಶಾಲೆಗೆ ಬರಬೇಡ" ಎಂದು ಮಾಸ್ತರರು ಕಟ್ಟಪ್ಪಣೆ ಮಾಡಿದ್ದರು. ತಾಯಿ ಯೋಚಿಸಿಕೊಂಡು, "ಶಾಲೆಗೆ ಹೋಗಬಾರದಾದರೆ ಹೋಗುವುದು ಬೇಡ, ಮಠ ಸೇರು, ಏನಾದರೂ ಚಾಕರಿ ಮಾಡು ಸಾಕು," ಎಂದುಬಿಟ್ಟರು. ನಾನು ಅಳುತ್ತಾ ಶಾಲೆಯ ಕಡೆ ಹೊರಟೆ. ದಾರಿಯಲ್ಲಿ ನೆರೆಮನೆಯ ಮಹಿಳೆ ನನಗೆ ಎದುರಾದರು. ಅಳುವ ಕಾರಣ ಕೇಳಿದರು. ನಾನು ಹೇಳಿದೆ. ಅವರು ಆಗಿಂದಾಗಲೇ ಎಂಟಾಣೆ ಕೊಟ್ಟು 'ಶಾಲೆಗೆ ಹೋಗು. ನಾಳೆಯಿಂದ ಮುಂಜಾನೆ ನಮ್ಮ ಮನೆಯಲ್ಲಿ ಪೂಜೆ ಮಾಡು. ನಿನಗೆ ಮುಂಜಾನೆಯ ಗಂಜಿ ಊಟ ಮತ್ತು ನಿನ್ನ ಶಾಲಾ ಫೀ ನಾನು ಕೊಡುತ್ತೇನೆ" ಎಂದರು. ಹೀಗೆ ಹತ್ತನೇ ವಯಸ್ಸಿನಲ್ಲಿ ನಾನು ಸ್ವಾರ್ಜಿತ ವಿತ್ತದಿಂದ ವಿದ್ಯಾಭ್ಯಾಸ ಮುಂದುವರಿಸಿದೆ ಎನ್ನಬೇಕು.

ನನ್ನ ಬಾಂಧವರೊಬ್ಬರ ಪ್ರಯತ್ನದಿಂದ ನನಗೆ ಹೈಸ್ಕೂಲಿನಲ್ಲಿ ಪ್ರವೇಶ ಸಿಕ್ಕಿತು. ಉದ್ದಕ್ಕೂ ಅವರು ನನ್ನ ಶಾಲಾ ಫೀಯ ಭಾರವನ್ನು ವಹಿಸಿದರು. ಆದರೆ ಮನೆಯ ಬಡತನ ~~[illegible]~~ ಬಿಗಿಯಾಗುತ್ತಲೇ ಇತ್ತು. ನಮ್ಮ ಹೊಕ್ಕ [illegible] ಉದರವನ್ನು [illegible]ಾಲಿಗರು ಇಳಿಸಿದ್ದರಿಂದ ಆದಾಯ ಇಳಿಮುಖವೇ ಆಗಿತ್ತು. ಬೇಸಿಗೆಯಲ್ಲೇ ಮಳೆಗಾಲ [illegible] ಕೈಬಾಕಿ [illegible] ನಗು[illegible]ಸಲಾರದೇ ಮಳೆಗಾಲದಲ್ಲಿ ಹಸಿ ಕಟ್ಟಿಗೆಯಿಂದ ಒಲೆ ಉರಿಸುವ ಪ್ರಯತ್ನದಲ್ಲಿ ನನ್ನ ತಾಯಿ [illegible] ಕೊಟ್ಟ ಒಂದು ದಿನ ನನ್ನ ಮೃತ ತಂದೆಯನ್ನು ಶಪಿಸಿದ್ದನ್ನು [illegible] ಮುಂದೆ ಪಾನಿಂ[illegible] [illegible] ನೋಡಿ ನನಗೆ ಶಾಲೆ ಬಿಟ್ಟು ಯಾವುದೂ ಕೆಲಸಕ್ಕೆ ಸೇರೋಣ ಅನಿಸಿದ್ದೂ ಇದೆ. [illegible] ಸಮಯ ಉಡುಪಿಯ ಪರಿಸರದಲ್ಲಿ ಎರಡು ಮೂರು ಶ್ರೀಮಂತರ ಮನೆಗಳಲ್ಲಿ ಬ್ರಾಹ್ಮಣರಿಗೆ ಊಟ ಮತ್ತು ಒಂದೆರಡು ಬಿಲ್ಲೆ ದಕ್ಷಿಣೆ ಸಿಗುತ್ತಿತ್ತು. ಆ ಸಮಯ ಶಾಲೆಗೆ ರಜೆಯೂ ಇರುತ್ತಿದ್ದುದರಿಂದ ಅಲ್ಲಿ ಹೋಗು ಅಂತ ನಮ್ಮ ತಾಯಿ ಒತ್ತಾಯಪಡಿಸಬೇಕು. ನನಗೋ [illegible] ಶ್ರೀಮಂತರ ಮನೆಗಳಲ್ಲಿ ಮಾರುದ್ದ ಹೊಟ್ಟೆಯನ್ನು ಗೇಣು ಮಾಡಿಕೊಂಡು ಒಂದೂಟಕ್ಕೆ ಬಾಯ್ಬಿಡುವುದೆಂದರೆ ಸತ್ತ ಹಾಗೆಯೇ ಆಗಬೇಕು. ಯಜಮಾನರಲ್ಲದಿದ್ದರೂ ಬಡಿಸುವವರು ವಕ್ರಗಣ್ಣುಗಳಿಂದ ನೋಡಿ, 'ನೀನು ನಿನ್ನೆ ಕೂಡ ಊಟಕ್ಕೆ ಬಂದಿರಲಿಲ್ಲವೆ? ನನಗೆ ನೋಡಿದ ಹಾಗಾಗುತ್ತದೆ' ಅಂತ ವ್ಯಥಾರೋಪ ಮಾಡಿದಾಗ ಉಂಡದ್ದನ್ನೆಲ್ಲ ಕಾರಿಬಿಡಬೇಕು ಅನಿಸುತ್ತಿತ್ತು.

ಒಂದು ಸಲ ನನ್ನ ಸಹಪಾಠಿಯೊಬ್ಬನ ಕ್ಲಿಪ್ಪನ್ನು ನಾನು ಕಳೆದೆ. ಆತ ಬೇರೆ ಕೊಡಿಸು ಇಲ್ಲದಿದ್ದರೆ ಎರಡಾಣೆ ದಂಡ ಕೊಡು ಅಂತ ಗಂಟುಬಿದ್ದುಬಿಟ್ಟ. ಎರಡಾಣೆಯನ್ನು ನಾನು ಎಲ್ಲಿಂದ ತರಬೇಕು? ತಾಯಿಯನ್ನು ಕೇಳಿದರೆ ಅವರು ಕೆಂಡವಾಗುವರು. ಕೊನೆಗೆ ದೇವರಿಗೆ ಮುಡಿಪೆಂದು ಅವರು ತೆಗೆದಿಟ್ಟಿದ್ದ ಎರಡಾಣೆಯನ್ನು ಕದ್ದು ನಾನು ಸಹಪಾಠಿಯ ಬ್ರಹ್ಮಜಾಲದಿಂದ ತಪ್ಪಿಸಿಕೊಂಡೆ. ನನ್ನ ತಾಯಿ ಅದನ್ನು ಹುಡುಕಿಯೇ ಹುಡುಕಿದರು. ಆದರೆ ನಾನು ಅದನ್ನು ಕದ್ದಿರಬಹುದೆಂಬ ಸಂಶಯ ಅವರ ಕನಸಿನಲ್ಲಿ ಕೂಡ ಸುಳಿಯಲಿಲ್ಲ. ನನ್ನ ಮೇಲಿನ ಅವರ ಈ ವಿಶ್ವಾಸ ನನ್ನ ಸೂಕ್ಷ್ಮವೇದಿ ಆತ್ಮದ ಮೇಲೆ ಹೊರಲಾರದ ಭಾರವಾಗಿ ಅನೇಕ ವರ್ಷಕಾಲ ಕಾಡಿತು.

W-5

ಹೈಸ್ಕೂಲು ಮುಗಿಸುವಷ್ಟರಲ್ಲಿ ಮನೆತನದ ಸ್ಥಿತಿ ತೀರ ಕಷ್ಟವಾಗಿಬಿಟ್ಟಿತು. ಆದ್ದರಿಂದ ಸ್ಕೂಲ್ ಫೈನಲ್ಲಿನಲ್ಲಿ ನಾನು ನಮ್ಮ ಶಾಲೆಗೆ ಪ್ರಥಮನಾಗಿ ಮತ್ತು ಗಣಿತ, ಸಂಸ್ಕೃತ

ಮತ್ತು ಇಂಗ್ಲೀಷಿನಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣನಾದರೂ ಕಾಲೇಜಿಗೆ ಹೋಗುವ ಭಾಗ್ಯ ನನ್ನದಾಗಲಿಲ್ಲ. ಅಂದಿನಿಂದ ನಾನು ಎಂಟು ರೂಪಾಯಿಯ ಶಾಲಾ ಮಾಸ್ತರಿಕೆ ಮಾಡಿದ್ದೇನೆ; ಹತ್ತು ರೂಪಾಯಿಯ ಅಂಗಡಿ ಕಾರಕೂನನಾಗಿ ಕಸಗುಡಿಸಿದ್ದೇನೆ; ಇಪ್ಪತ್ತೆರಡು ರೂಪಾಯಿಗೆ ಪ್ರೆಸ್ ಮೇನೇಜರನಾಗಿದ್ದೇನೆ; ಹದಿನೈದು ರೂಪಾಯಿಯ ಹೋಟೆಲು ಮಾಣಿಯೂ ಆಗಿ ದುಡಿದಿದ್ದೇನೆ. ಅದೆಲ್ಲದರ ರಾಮಾಯಣವನ್ನು ಇಲ್ಲಿ ವಿಸ್ತರಿಸಲು ನನ್ನ ಮನಸ್ಸು ಒಪ್ಪುವುದಿಲ್ಲ.

ಇವೆಲ್ಲ ಸಂಕಟಗಳನ್ನು ಮೀರಿ ನಾನು ತಕ್ಕಮಟ್ಟಿನ ಉನ್ನತಿಯನ್ನು ಸಾಧಿಸಿಕೊಂಡಿದ್ದೇನೆ ಎನ್ನುವುದು ನಿಜ. (~~ಈ ಕಾರಣದಿಂದಲೇ ಈ ಭಾಷಣ ಮಾಲಿಕೆಯಲ್ಲಿ ನನ್ನನ್ನು [illegible] ಕರೆದಿದ್ದರೆ [illegible] ಇಲ್ಲ~~). ಆದರೆ ಈ ಅಲ್ಪ ಯಶಸ್ಸಿನಲ್ಲಿ ನನ್ನ ಸ್ವಂತ ಪಾಲು ಎಷ್ಟು ಅದೃಷ್ಟಬಲದ್ದು ಎಷ್ಟು ಎಂತ ಲೆಕ್ಕ ಹೇಳಲು ನನಗೆ ಧೈರ್ಯ ಇಲ್ಲ. ನನಗೆ ಜನ್ಮತಃ ಸಾಮಾನ್ಯಕ್ಕಿಂತ [illegible] ಬುದ್ಧಿಶಕ್ತಿ ಇತ್ತು. ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ [illegible] ಕುತೂಹಲವಿತ್ತು. ನನ್ನ ಹನ್ನೊಂದನೇ ವಯಸ್ಸಿನಲ್ಲಿ ನಾನು ಪದ್ಯ ಬರೆಯಲು ಆರಂಭಿಸಿದೆ. ಅಂದಿನಿಂದ ನಾನು ಪದ್ಯಗದ್ಯಗಳನ್ನು ಬರೆಯುತ್ತಲೇ ಇದ್ದೇನೆ. ಜ್ಞಾನದಾಹವಿದ್ದುದರಿಂದಲೇ ನಾನು ಕಾಲೇಜು ಕಟ್ಟೆ ಹತ್ತದೆ ಇದ್ದರೂ ನಾಲ್ಕು ಜನ ವಿದ್ಯಾವಂತರ ಮನ್ನಣೆ ಪಡೆಯಲು ಸಮರ್ಥನಾಗಿದ್ದೇನೆ. ಆದರೆ ಇಂದು ನಾನು ಏನನ್ನಾದರೂ ಸಾಧಿಸಿದ್ದರೆ, ನನ್ನಲ್ಲಿ ಯಾರಾದರೂ ಗುಣವನ್ನು ಕಂಡು, ಕರೆದು ಕೆಲ[illegible]ದು ಕಾರಣ ಹೊರತು ನನ್ನ ಸ್ವಪ್ರಯತ್ನ ಎಂದು ನಾನು ಹೇಳಿಕೊಳ್ಳಲಾರೆ. ನನ[illegible]ನ್ನು ~~[illegible]~~ [illegible]ಯತ್ನ [illegible] ಮಾಡಲಿಂದಲೂ [illegible] ~~[illegible]~~ ಮಾತಲ್ಲ. ಗುಣಗ್ರಾಹಿಗಳು ಸಿಕ್ಕದಿದ್ದರೆ ಬಹುಶಃ ನಾನು ಏನನ್ನೂ ಸಾಧಿಸುತ್ತಿರಲಿಲ್ಲ. ಏಕೆಂದರೆ ಬಾಲ್ಯದ ಬಡತನದಿಂದ ಬಂದ ಅಳುಕಿನ ಸ್ವಭಾವ ನನಗೆ ಮುನ್ನುಗ್ಗಲು ಪ್ರಚಂಡ ಆತಂಕವಾಗಿತ್ತು. ಈ ಅಳುಕು ಇಲ್ಲದಿದ್ದರೆ ಬಹುಶಃ ನಾನು ನನ್ನಲ್ಲಿರುವ ಗುಣಗಳನ್ನು ಇನ್ನಷ್ಟು ಪ್ರಯೋಜನಕರವಾಗಿ ~~[illegible]~~ ಬಳಸಬಹುದಾಗಿತ್ತೆಂದು ನಾನು ಖಂಡಿತವಾಗಿ ನಂಬಿದ್ದೇನೆ.

ಬಡತನ ಮನುಷ್ಯನನ್ನು [illegible] ಪ್ರಯತ್ನಕ್ಕೆ ಪ್ರಚೋದಿಸುತ್ತದೆ. ಇತ್ಯಾದಿಯಾಗಿ ಹೇಳುವವರು ರೋಮ್ಯಾಂಟಿಕ ಕಲ್ಪನೆಗಳಿಂದ ಪ್ರೇರಿತರಾಗಿದ್ದಾರೆಂದೇ ನಾನು ಹೇಳುತ್ತೇನೆ. ಯೋಗ್ಯತೆಯೊಂದಿದ್ದರೆ ಬಡತನದ ಸಹಾಯವಿಲ್ಲದೆಯೇ ಉನ್ನತಿಯನ್ನು ಸಾಧಿಸಲು ಸಾಧ್ಯವಿದೆ. ಬಡತನದಲ್ಲಿ ಯಾವ ಗುಣವೂ ಇಲ್ಲ. ~~ಇದು ನನ್ನ ಅನುಭವ.~~

— — — —

ಬಿ.ಗ.
.10.

91 - 6

ಮೈ.ವಿ.ವಿ. ಕನ್ನಡ ಗ್ರಂಥ ಸಂಪಾದನೆ
ಕನ್ನಡ ಲೇಖಕರು

1. ಹೆಸರು:

ಆಚಾರ್ಯ ಪಾಡಿಗಾರು ವೆಂಕಟ ರಮಣ

2. ಜನ್ಮ:

5.2.1915

3. ತಂದೆ ಪಿ. ಲಕ್ಷ್ಮೀ(ನಾರಾಯಣ)ಆಚಾರ್ಯ, ತಾಯಿ ಸೀತಮ್ಮ; ಜನ್ಮಸ್ಥಳ: ಉಡುಪಿ, ದ. ಕನ್ನಡ. ಜಿಲ್ಲೆ ಕ್ಷೇತ್ರ: ಸೋದೆ, ಶಿರಸಿ ತಾಲೂಕು, ಉ. ಕನ್ನಡ; ಮತ್ತು ಉಡುಪಿ.

4. ಶಿಕ್ಷಣ:

ಉಡುಪಿ, ಶ್ರೀ ಅನಂತೇಶ್ವರ ಬಳಿ ಸೆಂಟ್ರಲ್ ಶಾಲೆ ಮತ್ತು ಬೋರ್ಡ್ ಹೈಸ್ಕೂಲು; 1932ರ ಎಸ್.ಎಸ್.ಎಲ್ಸಿ ತಂಡದಲ್ಲಿ ಉಡುಪಿಗೆ ಪ್ರಥಮ; ಅನಂತರ 40ದಿ(ನ) ರಾಷ್ಟ್ರಭಾಷೆ.

5. ಕೌಟುಂಬಿಕ:

ಮದುವೆ: 1937; ಪತ್ನಿ ಲಕ್ಷ್ಮೀಬಾಯಿ; ಮಕ್ಕಳು 5 ಗಂಡು, 3 ಹೆಣ್ಣು; ಎಲ್ಲರೂ ಸುಶಿಕ್ಷಿತರು;

સ્વતંત્ર [illegible] વૃત્તિ/: પ્રથ
મતઃ શિક્ષક; પછી [illegible]
~~[illegible]~~ [illegible]
[illegible],
[illegible] 1942 [illegible]
ઉપસંપાદક "[illegible]",
1956 ~~[illegible]~~ -1975 - સંપા
દક: "[illegible]", [illegible].
નિવૃત્તિ: 1975

6. [illegible] : [illegible].

7. 1954: કવિતા સંગ્રહ
"નવ [illegible]"ને [illegible]
[illegible] 1000 [illegible]
[illegible].

8. [illegible]/ [illegible]:
[illegible]
[illegible],

9. [illegible]
82, [illegible]
[illegible],
ન. દિલ્હી-22

10. కృతిగ్రస్తు:

మూల కృతులు 4 ;

ప్రాసంగిక —

సంపాదక — 1

11. బిరుదాలు: గానం, గాంధ

లోపాధ్య; గాత్ర రత్న.

12. కృతులు: (సంపాదన)

1. దేశ్వర ... [illegible]

2. "నవ ఉదయం" (కవితలు)

3. "ప్రభాత" కవితలు సంపుట

4. "స్వాతంత్ర్య పోరాట కవితలు"

నాటకం

సంపాదకత్వం: ప్రతిభ

5. "మహాభారత" కథా సంకలన

చదివిన కవితలు (సంకలనం)

సుమారు 1200 పద్యాలు

కవితలు;

చదివిన నాటకం వ్రాసిన


పద్యాలు; వేదిక మీద

పాడినవి ఉన్నవి.

14. ఉపన్యాసములు: ~~ప్రచురితం~~
~~ఎన్నింటికో సంకలనం లేదు~~
పుటలు ౩౦.

15. సత్యవిత్తు ముత్తు ~~రచనల~~ [illegible]
ఆ ఏకాంతవేళల నీవు లేక
అర ప్రపంచం చదివింది;
~~[illegible]~~ నాటక ప్రదర్శనలవల్ల [illegible]
దృశ్యాలన్న కాలయమునిల [illegible]
[illegible] ప్రేమలు;
సమాంత [illegible] అవతారముల [illegible]
[illegible] ఎస్. ఎమ్. ఎస్. [illegible]
[illegible] స్మృతి; [illegible],
[illegible] ముత్తు ఇంగ్లీషు కవి
[illegible] ప్రపంచ ప్రఖ్యాత
[illegible] [illegible]
ప్రపంచ ప్రఖ్యా





ಕಳೆದದ್ದೆಷ್ಟು ಗಳಿಸಿದ್ದೆಷ್ಟು?

ಜೀವನದ ಒಂದು ಸಿಂಹಾವಲೋಕನ

ಪಾವೆಂ ಆಚಾರ್ಯ

ಇತ್ತೀಚೆ ನಡೆದ ದ. ಕ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಪಾವೆಂ ವಹಿಸಿದ್ದರು. ಆ ಸಂದರ್ಭದಲ್ಲಿ ಆಹ್ವಾನಿಸಲಾದ ವಿಶೇಷ ಲೇಖನ.

ಎಪ್ಪತ್ತೆರಡನೇ ವಯಸ್ಸು ಒಬ್ಬನಿಗೆ ತಾನು ಬಾಳಿದ ಬದುಕನ್ನು ಹಿಂದಿರುಗಿ ನೋಡಿ, ಮಾಡಿದ್ದೆಷ್ಟು ಆದದ್ದೆಷ್ಟು, ಗಳಿಸಿದ್ದೆಷ್ಟು ಕಳೆದದ್ದೆಷ್ಟು, ಎಂಬ ಲೆಕ್ಕಾಚಾರ ನೋಡಲು ತೀರ ಅಕಾಲವೆನಿಸಲಿಕ್ಕಿಲ್ಲವೆಂದು ನನ್ನೆಣಿಕೆ. ಅಷ್ಟು ಹೊತ್ತಿಗೆ ನಮಗೆ ಬದುಕಿನ ದಾರವಂದ ಸಾಕಷ್ಟು ಸಲ ಹಣೆಗೆ ಬಡಿದು ಅಹಂಕಾರವನ್ನು ತಗ್ಗಿಸಿರುತ್ತದೆ. ಅಹಂಕಾರದ ಮೇಲೆ ನನ್ನ ದೂರೇನೂ ಇಲ್ಲ. ತನ್ನ ಕಾಲ ದೇಶಗಳಲ್ಲಿ ಅದಕ್ಕೆ ಮಹತ್ತರವಾದ ಸ್ಥಾನವಿದೆ. ಅದು ಇಲ್ಲದೆ ನಮ್ಮಿಂದ ಏನೂ ಸಾಧಿಸದು. ಆದರೆ ಅದು ರಾಜಸ. ರಜಸ್ಸು ಎಂದರೆ ಧೂಳಿನ ಕಣಗಳು. ಅಹಂಕಾರದ ರಜಸ್ಸು ನಮ್ಮ ಕಣ್ಣುಗಳಿಂದ ನಮ್ಮ ದೋಷ-ದೌರ್ಬಲ್ಯಗಳನ್ನು ಮರೆಸುತ್ತದೆ. ಆಕಾಶಕ್ಕೆ ತನ್ನ ನೀಲಿ ಬಣ್ಣವನ್ನು ಕೊಟ್ಟದ್ದು ರಜಸ್ಸಿನ ಕಣಗಳು ಎಂದು ವಿಜ್ಞಾನಿಗಳು ಹೇಳುತ್ತಾರೆ. ಬದುಕಿಗೆ ಬಣ್ಣ ಕೊಡುವುದೂ ಈ ರಜಸ್ಸೇ. ಆದರೆ ನಾವು ನಮ್ಮ ಬದುಕನ್ನು ನಿಜವಾದ ಅರ್ಥದಲ್ಲಿ ಬಾಳಿದ್ದರೆ ಈ ರಜಸ್ಸಿನ ಕಣಗಳು ಮೆಲ್ಲಮೆಲ್ಲನೆ ಸೋಸಲ್ಪಟ್ಟು ನಮ್ಮ ನಿಜದ ನೆಲೆ ತಿಳಿಯಬೇಕು. ಇದು ಸಾತ್ವಿಕದ ಕಡೆ ಪಯಣ. ನಮ್ಮನ್ನು ನಾವು ಬಣಗು ಬಣ್ಣ ಕಟ್ಟಿ ನೋಡಿಕೊಳ್ಳುವುದನ್ನು ಸಾಕಷ್ಟು ಬಿಡಿಸಿ, ನಮ್ಮನ್ನು ನಾವು ಮೂಲ ಬಿಂಬದಲ್ಲಿ ಕಾಣಲು ನೆರವಾಗುವುದು ಅನುಭವದ ಒಂದು ದಾಯ. ಹಾಗೆ ನಾವು ನಮ್ಮ ಕೈಯ ತುತ್ತನ್ನು ನಮ್ಮ ಬಾಯಲ್ಲೇ ಇಕ್ಕಿಕೊಂಡಿರುವ ತನಕ ಒಂದಿಷ್ಟು ಅಹಂಕಾರ

ಇದ್ದೇ ಇರುತ್ತದೆ. ಕನ್ನಡಿಯಲ್ಲಿ ಪ್ರತಿಬಿಂಬ ಕಾಣಬೇಕಾದರೂ ಅದರ ಹಿಂದೆ ಒಂದಿಷ್ಟು ಪಾರಜ ಲೇಪ ಬೇಕಾಗುತ್ತದೆ. ನಾವು ಆದರ್ಶದ ಹತ್ತಿರ ಹತ್ತಿರಕ್ಕೆ ಬರಲಾಪವೇ ಹೊರತು ಆದರ್ಶವನ್ನೇ ತಲಪಲಾರೆವು. ಹಾಗೆ ನನ ಬದುಕನ್ನು ಸಿಂಹಾವಲೋಕನ ಮಾಡಿಕೊಳ್ಳುತ್ತೇನೆ.

ಹುಟ್ಟಿದ್ದು ೧೯೧೫, ಉಡುಪಿಯಲ್ಲಿ. ತಂದೆ ಪಾಡಿಗಾರು ಲಕ್ಷ್ಮೀನಾರಾಯಣಾಚಾರ್ಯರು, ತಾಯಿ ಸೀತಮ್ಮ. ಉಭಯತರೂ ವೈದಿಕ ಬ್ರಾಹ್ಮಣ ಕುಲದವರು. ತಂದೆ ಋಗ್‌ವೇದದ ಎಂಟೂ ಅಷ್ಟಕಗಳನ್ನು ಪುಸ್ತಕದ ನೆರವಿಲ್ಲದೆ ಪಠಿಸಬಲ್ಲವರಾಗಿದ್ದರಂತೆ. ವೇದಗಳ ಹೊರಗೂ ಸಾಕಷ್ಟು ಸಂಸ್ಕೃತ ಮತ್ತು ಮುಂದೆ ಕನ್ನಡ ಓದಿದವರಂತೆ. ಅವರ ವೈದಿಕ ವಿದ್ಯೆ ಅವರನ್ನು ಜಡರಾಗಿ ಮಾಡಲಿಲ್ಲ. ಅವರು ಆ ಕಾಲದಲ್ಲಿ 'ರಸಿಕ' ಶಬ್ದಕ್ಕಿದ್ದ ಎಲ್ಲ ಅರ್ಥಗಳಲ್ಲಿ ರಸಿಕರಾಗಿದ್ದರು; ದಿಟ್ಟರೂ ಆಗಿದ್ದರು. ಅವರಿಗೆ ನಾಟಕ, ಹರಿಕಥೆಗಳ ಹವ್ಯಾಸವಿತ್ತು. ಇದನ್ನು ನಮ್ಮ ತಾಯಿ ಕಷ್ಟ ಸಮಯದಲ್ಲಿ ಕೋಪದಿಂದ, ಉಳಿದ ವೇಳೆಯಲ್ಲಿ ಮೆಚ್ಚಿಕೆಯಿಂದ ಹೇಳುತ್ತಿದ್ದರು. ತಂದೆ ಧಾರಾಳವಾಗಿ ಗಳಿಸಿದ್ದರೂ ನಮ್ಮನ್ನು ಬಡತನದಲ್ಲಿ ಬಿಟ್ಟು ಹೋಗಲು ಈ ರಸಿಕತೆ ಕಾರಣವೆಂದು ನಮ್ಮ ತಾಯಿ ಹೇಳುತ್ತಿದ್ದರು. ನಾಲ್ಕು ಹೆಣ್ಣು ಮಕ್ಕಳ ನಂತರ ಉಳಿದುಕೊಂಡ ಏಕಮಾತ್ರ ಪುತ್ರನಾದ ನನ್ನಿಂದ ಪಿತೃಗಳು ಲುಪ್ತಪಿಂಡೋದಕರಾಗುವುದು ತಪ್ಪಿತು. ಆದರೆ ನಾನು ಅವರಿಗೆ ಬಿಡುತ್ತ ಬಂದ ತರ್ಪಣದ ಉದಕ ಬಹುಕಾಲ ನಮ್ಮ ತಾಯಿಯ ಕಣ್ಣೀರಿನಿಂದ ಕವೋಷ್ಣವಾಗಿರುತ್ತಿತ್ತು, ಎನ್ನದಿರಲಾರೆ.

ನನಗೆ ಐದಾಗುವಾಗ ನಮ್ಮನ್ನಗಲಿದ ಇಂಥ ತಂದೆಯ ಬಗ್ಗೆ ನನಗೇನನಿಸುತ್ತದೆ? ಇಷ್ಟು ದೂರದಿಂದ ನನಗೆ ದೂರತಕ್ಕದ್ದೇನೂ ಕಾಣುವುದಿಲ್ಲ. ಅವರ 'ರಸಿಕತೆ' ನನಗೆ ಬರಲಿಲ್ಲ. ಆದರೆ ಅವರು ನನ್ನನ್ನು ಅಷ್ಟು ಬಾಲ್ಯದಲ್ಲೇ ಬಿಟ್ಟು ಹೋಗಿದ್ದರೂ ನನ್ನ ಬದುಕಿನಲ್ಲಿ (ಬದುಕಿಗೆ ಜೀವನವೆಂದೂ, ಸೊತ್ತು ಎಂದೂ ಅರ್ಥಗಳುಂಟಲ್ಲ!) ನನ್ನ ತಂದೆಯ ಎಷ್ಟು ಅಂಶ ಇದೆ, ಎಂದು ಯೋಚಿಸಿದರೆ ನಾನು ಏನೇನಾಗಿದೆ ನೋ ಅದರಲ್ಲಿ ಅವರು ದೊಡ್ಡ ಅಂಶವಾಗಿದ್ದಾರೆಂದೇ ನನಗೆ ತೋರುತ್ತದೆ. ಅವರು ಆ ಅವರಾಗಿರದಿದ್ದರೆ ನಾನು ಈ ನಾನಾಗಿರುತ್ತಿದ್ದಿಲ್ಲ. ನನ್ನ ಸಾಹಿತ್ಯ, ಕಲಾಸಕ್ತಿಯಲ್ಲಿ, ನನ್ನ ಕುತೂಹಲ ಮಯ ಮಿದುಳಿನಲ್ಲಿ ನನ್ನ ತಂದೆ ಇದ್ದಾರೆ. ನಮ್ಮ ಕುಲದ ಪರಂಪರೆಯನ್ನು ಮುರಿದು ಅವರು ನನ್ನ ಅಕ್ಕಂದಿರಿಗೆ ಓದುಬರಹ ಕಲಿಸಿದ್ದರು ಹರಿಕಥೆ, ನಾಟಕಗಳ ವಾತಾವರಣವನ್ನು ಮನೆಯಲ್ಲಿ ಕಲ್ಪಿಸಿದ್ದರು. ಈ ಅಕ್ಕಂದಿರು ನನ್ನ ಮೊದಲ ಶಿಕ್ಷಕರಾದರು (ತಾಯಿ ಧೀರೆಯಾದರೂ ನಿರಕ್ಷರಿಯಾಗಿದ್ದರು). ಅವರು ನನ್ನನ್ನು ತಮಗರಿಯದೆಯೇ ನನ್ನ ಭವಿಷ್ಯದತ್ತ ಮುಖಮಾಡಿ ತಳ್ಳಿದರು. ಕಡು ಬಡತನದಲ್ಲಿ ನಾನು ಓದಿ ಸಾಹಿತಿಯಾದೆನೆಂದುಕೊಳ್ಳುವಾಗ ಈ ಮೂಲಭೂತ ಉಪಕರಣಗಳಿದ್ದಿಲ್ಲವಾದರೆ ನಾನು ಏನಾಗ ಬಹುದಿತ್ತು? ಎಂಬ ಯೋಚನೆ ಬಾರದಿರುವುದಿಲ್ಲ.

ಬಡತನದ ಮಾತು ಹೇಳಿದೆ. ನಾನು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದೆನೆಂದು ಹೇಳಿದೆ. ನಾನು ಉಡುಪಿಯಲ್ಲಿ ಹುಟ್ಟಿದೆನೆಂದು ಹೇಳಿದೆ. ಬಡತನದಲ್ಲಿ ಜನಿಸಿದೆ, ಹೌದು; ಆದರೆ ಐದನೇ ಇಯತ್ತೆಯಲ್ಲಿ ತಿಂಗಳ ಎಂಟಾಣೆ ಶಾಲಾ ಶುಲ್ಕ ಕೊಡಲಾರದೆ ಶಾಲೆ ಬಿಡುವ ಪ್ರಸಂಗವನ್ನೆದುರಿಸಿ ಅಳುತ್ತಾ ಶಾಲೆಯ ಕಡೆ ಹೊರಟಿದ್ದಾಗ ಶಾಲೆಯಿಂದ ಇಪ್ಪತ್ತೈದೋ ಮೂವತ್ತೋ ಗಜ ಮುಂಚಿತವಾಗಿ ನಮ್ಮ ನೆರೆಮನೆಯ ಆಸ್ತಿಕ ವಿಧವೆ ಸರಸ್ವತಿಯಮ್ಮ ಎದುರಿಗೆ ಸಿಕ್ಕಿರದಿದ್ದರೆ ಮತ್ತು ಅವರು ನನ್ನ ಅಳು ನೋಡಿ ತತ್‌ಕ್ಷಣ ತಮ್ಮ ಶ್ರೀಮುದ್ರೆಯ ಸಂಪುಷ್ಟದಿಂದ ಎಂಟಾಣೆ ತೆಗೆದುಕೊಟ್ಟು ತಿಂಗಳು ತಿಂಗಳೂ ಫೀ ಕೊಡುವುದಾಗಿ ಮಾತುಕೊಟ್ಟಿರದಿದ್ದರೆ? ಬದುಕಿನ ಆಗು ಹೋಗುಗಳು ಎಷ್ಟು ಆಕಸ್ಮಿಕ! ಅವರು ಶ್ರೀಕೃಷ್ಣಮಠದಿಂದ ಎರಡು ಮಿನಿಟು ತಡವಾಗಿ ಹೊರಟಿದ್ದರೆ ಅವರು ನನ್ನನ್ನು ಸಂಧಿಸುತ್ತಲೇ ಇರಲಿಲ್ಲ. ಅದು ನನ್ನ ಲೌಕಿಕ ಶಿಕ್ಷಣದ ಅವಸಾನವಾಗಬಹುದಿತ್ತು: ನಾನು ಬ್ರಾಹ್ಮಣ ವಟುವಾಗಿರದಿದ್ದರೆ ಅವರು ಈ ಔದಾರ್ಯ ತೋರಿಸುತ್ತಿದ್ದರೇ? ನಾನರಿಯೇ. ಉಡುಪಿಯಲ್ಲಿ ಹುಟ್ಟಿ ಬೆಳೆದೆನೆಂದೆನಲ್ಲ. ನನ್ನ ಶಿಕ್ಷಣ ಮುಗಿಯುವವರೆಗೆ

ನನ್ನ ತಾಯಿ ತಮ್ಮ ಅನ್ನವನ್ನು ನನಗೆ ಹಾಕಿ ತಾವು ಕೃಷ್ಣಮಠದಲ್ಲಿ ಹೋಗಿ ಊಟಮಾಡಿ ಏಕ ಭುಕ್ತಿಯಲ್ಲಿ ಬದುಕಿದರು. ಹೌದು. ಕ್ವಚಿದಪಿ ಕುಮಾತಾ ನ ಭವತಿ. ಆದರೂ ನಾವು ಉಡುಪಿಯಲ್ಲಿದ್ದಿಲ್ಲವಾದರೆ ಮತ್ತು ನಾವು ಬ್ರಾಹ್ಮಣರಾಗಿದ್ದಿಲ್ಲವಾದರೆ ಈ ಉಚಿತ ಭೋಜನ ತಾಯಿಗೆ ಸಿಗುತ್ತಿರಲಿಲ್ಲ; ಬಹುಶಃ ನಾವಿಬ್ಬರೂ ಗದ್ದೆಗಳಲ್ಲಿ ದುಡಿಯಬೇಕಾಗುತ್ತಿತ್ತು; ವಿದ್ಯೆ ಕಲಿಯಬೇಕೆಂಬ ಐಡಿಯವೇ ನನ್ನ ತಲೆಯಲ್ಲಿ ಹೊಕ್ಕುತ್ತಿರಲಿಲ್ಲ. ಆದಕ್ಕೇ ಶೂದ್ರನ ಬಡತನವನ್ನೂ ಬ್ರಾಹ್ಮಣನ ಬಡತನವನ್ನೂ ಒಂದೇ ತೂಕದ ಕಲ್ಲಿನಿಂದ ತೂಗಲಾಗುವುದಿಲ್ಲವೆಂದು ನಾನು ಹೇಳುವುದು.

ವೈದಿಕ ಬ್ರಾಹ್ಮಣರೆಲ್ಲ — ಅನುಕೂಲವಂತರೂ ಸೇರಿ–ಸಂಸ್ಕೃತ ಶಾಲೆಗೆ ಹೋಗುತ್ತಿರುವಾಗ ನನಗೊಬ್ಬನಿಗೆ ಇಂಗ್ಲಿಷ್ ಶಾಲೆಗೆ ಹೋಗುವ ಹುಚ್ಚು ಹೇಗೆ ತಗಲಿತೋ ನನಗೆ ನೆನಪಾಗುವುದಿಲ್ಲ. ಕ್ಲಾಸಿನಲ್ಲಿ ಯಾವಾಗಲೂ ಮೊದಲಿಗನಾಗಿದ್ದರಿಂದ ಎಲಿಮೆಂಟರಿ ಶಾಲೆಯ ಉಪಾಧ್ಯಾಯರು ಆ ಬೀಜ ಬಿತ್ತಿರಬಹುದು. ಸರಿ, ಬೋರ್ಡ್ ಹೈಸ್ಕೂಲಿನಲ್ಲಿ ಸಂಸ್ಕೃತ ಪಂಡಿತರಾಗಿದ್ದ ನನ್ನ ಹಿರಿಯಣ್ಣ (ದೊಡ್ಡಪ್ಪನ ಮಗ) ವೆಂಕಟದಾಸಾಚಾರ್ಯರು ನನ್ನನ್ನು ಹೈಸ್ಕೂಲಿಗೆ ಹಾಕುವ ಹೊಣೆಯನ್ನು ಹೊತ್ತಿರದಿದ್ದರ (ಅವರೂ ಶ್ರೀಮಂತರಲ್ಲ) ನನ್ನ ಆಸೆ ಬಯಲಾಸೆಯಾಗಿ ಉಳಿದು, ಆಗ ಬ್ರಾಹ್ಮಣ ಹುಡುಗರ ಆಕರ್ಷಣೆಯಾಗಿದ್ದ ಗಟ್ಟದ ಮೇಲಿನ ಹೋಟೆಲ್ ಉದ್ಯೋಗಕ್ಕೋ ಅಥವಾ ಸಂಸ್ಕೃತ ಶಾಲೆಯ ಶಿರೋಮಣಿಯಾಗಿ ನಿರಾಮಿಷವಾದ ಪಂಡಿತವೃತ್ತಿಗೋ ಆತುಕೊಳ್ಳಬೇಕಾಗುತ್ತಿತ್ತು. ಅಲ್ಲಿಯಾದರೂ ನಾನು ನಾಲಾಯಖನಾಗಿರುತ್ತಿರಲಿಲ್ಲ. ನನ್ನ ಕಥೆ ಬೇರೆಯಾಗಿರುತ್ತಿತ್ತು, ಅಷ್ಟೆ.

ಶಾಲೆಗೆ ಮೊದಲನೆಯವನಾಗಿ ಎಸ್. ಎಸ್. ಎಲ್. ಸಿ. ಯಲ್ಲಿ ಪಾಸಾದೆ. ಓದಿ ಓದಿ ಅಲ್ಲ, ಏನನ್ನೂ ಒಂದೇ ಶ್ರುತಕ್ಕೆ, ಒಂದೇ ಪಠಿತಕ್ಕೆ ಗ್ರಹಿಸುವ ಜನ್ಮಸಿದ್ಧ ಶಕ್ತಿ ಇದ್ದದ್ದರಿಂದ. ಹೌದು, ಪಠ್ಯಗಳ ಹೊರಗಿನ ಕಥೆ, ಕಾದಂಬರಿ, ಕವಿತೆಗಳನ್ನು ಹಗಲಿರುಳೂ ಓದುತ್ತಿದ್ದೆ. ಹುಬ್ಬಳ್ಳಿಯಲ್ಲಿ ಹೋಟೆಲ್ ವ್ಯವಸಾಯ ಮಾಡುತ್ತಿದ್ದ ನೆರೆಮನೆಯವರಿಂದ ಎರವಲು ತಂದು. ಇದು ನನ್ನ ಮನಸ್ಸನ್ನು ಅರಳಿಸಿತು. ನಾನೂ ಬರೆಯಬೇಕೆಂಬ ಹಂಬಲ ಹುಟ್ಟಿಸಿತು. ಈ ನಡುವೆ ಯಾರ ನೆರವೂ ಇಲ್ಲದೆ ಔಷಧದ ರದ್ದಿ ಕ್ಯಾಟಲಾಗ್ ಸಹಾಯದಿಂದ ಬಂಗಾಲಿ ಕಲಿತೆ. ಐದನೇ ಇಯತ್ತೆಯಲ್ಲಿ, ಸಿಲಬಸ್ಸಿನಲ್ಲಿಲ್ಲದಿದ್ದ ಭಾಮಿನೀ ಷಟ್ಪದಿಯ ಲಕ್ಷಣವನ್ನು ಕಲಿಸಿದ ಹಂಗಾಮಿ ಮಾಸ್ತರ್ ಭಾಂಡಾರಕರ್ ಅವರ ಅವ್ಯಾಪಾರದ ಪ್ರಯೋಜನ ಪಡೆದು ತತ್‌ಕ್ಷಣವೇ ಪದ್ಯರಚನೆ ಆರಂಭಿಸಿದೆ (ವಯಸ್ಸು ೧೧). ಎರಡನೇ ಫಾರ್ಮಿನ ಪಠ್ಯ ಪುಸ್ತಕದಲ್ಲಿದ್ದ ರನ್ನನ ಗದಾಯುದ್ಧದ "ಯಮರಾಜಪ್ರಿಯ ಸೂಮಗಂ ನಿನಗಮಾ ಗಾಂಡೀವ ಧನ್ವಂಗಮಾ ಯಮಳರ್ಗಂ" ಎಂಬಲ್ಲಿಂದಾರಂಭವಾಗಿ "ಗತಕಾಲಂ ಲಯಕಾಲಮಾಯ್ತು, ನಿನಗಿನ್ನಾಯ್ತಂತ್ಯ ಕಾಲಂ ಗಡಾ!" ಎಂಬಲ್ಲಿವರೆಗಿನ ಭಾಗದಿಂದ ಸ್ಫೂರ್ತಿ ಹೊಂದಿ ಕಂದ ವೃತ್ತಗಳಲ್ಲಿ ಪದ್ಯ ಬರೆಯತೊಡಗಿದೆ. ಒಂದು ಚಂಪೂ ಮಹಾಕಾವ್ಯ ಬರೆಯುವ ಹುಮ್ಮಸದಲ್ಲಿ "ವಿಲಸತ್ ಸಾಹಿತ್ಯ ಕಾಂತಾ ಕುಚಯುಗಲ ಸಮಾಕ್ರಾಂತ ಸದ್ರತ್ನ ಹಾರಕ್ಕೆ ಲಲಾಮಪ್ರಾಯಮಪ್ಪಾ" ಎಂದಾರಂಭ ಮಾಡಿ ಹತ್ತೈವತ್ತು ಕಂದವೃತ್ತಗಳನ್ನು ಬರೆದೆ. ನಮ್ಮ ದೊಡ್ಡಣ್ಣ ವಿದ್ವಾನ್ ಪರೀಕ್ಷೆಗೆ ಕಟ್ಟಿ ತಮ್ಮ ಮನೆಯಲ್ಲಿ ತಂದಿಟ್ಟುಕೊಂಡಿದ್ದ ಛಂದೋಂಬುಧಿ, ಶಬ್ದ ಮಣಿದರ್ಪಣ, ಭಿಕ್ಷಾಟನ ಚರಿತೆ ಮೊದಲಾದವನ್ನು ತಂದು, ಇಡಿ ಇಡಿಯಾಗಿ ನುಂಗಿ ಹಾಕಿದೆ. ವಿರೂಪಾಕ್ಷಪಂಡಿತನ ಋತು ವರ್ಣನೆಯನ್ನು ಪದ್ಯದಲ್ಲಿ ಓದಿ ವಾರ್ಧಕ ಷಟ್ಪದಿಗಳನ್ನು ಬರೆದೆ. ಶಾಲೆಯಲ್ಲಿ ಏನೇನು ಬರೆಯಬಾರದೋ ಅದನ್ನೆಲ್ಲ ಬರೆದೆ. ಮತ್ತು ಒಳ್ಳೆಯ ಮಟ್ಟದಲ್ಲಿ ತೇರ್ಗಡೆಯಾದೆ.

ಸಾಧನೆಗಳಲ್ಲವೆ? ನಿಜ. ಆದರೆ ಕೇಳಿ. ತಾವು

ಹೆಡ್ಮಾಸ್ತರರಾಗಿ ಬಂದ ಮೇಲೆ ಎಸ್. ಎಸ್. ಎಲ್. ಸಿ. ಗೆ ಕೂತ ಮೊದಲನೆಯ ಬ್ಯಾಚಿನ ಹುಡುಗರಲ್ಲಿ ಮೊದಲನೆಯವನಾಗಿ ತೇರ್ಗಡೆಯಾದ ನನ್ನ ಮೇಲೆ ಅಭಿಮಾನದಿಂದ, ದಿವಂಗತ ರಾಕಿ ಫರ್ನಾಂಡೀಸರು (ಆಸ್ಕರ್ ಫರ್ನಾಂಡೀಸರ ತಂದೆ) ಮಂಗಳೂರಿನ ಅಲೋಸಿಯಸ್ ಕಾಲೇಜಿಗೆ ಹೋಗು, ಅಲ್ಲಿಯ ಪ್ರಿನ್ಸಿಪಾಲರಿಗೆ ಹೇಳಿ ಫ್ರೀಶಿಪ್ ಕೊಡಿಸುತ್ತೇನೆ–ಎಂದಾಗ, ನಾನು ಆ ಅವಕಾಶವನ್ನು ಉಪಯೋಗಿಸಿಕೊಳ್ಳದಾದೆ. ಇದಕ್ಕೆ ನನ್ನ ಹತ್ತಿರ ಸಬೂಬುಗಳೇನೋ ಇವೆ. ಮನೆಯ ಆರ್ಥಿಕ ಸಂಕಟ, ಮಂಗಳೂರಲ್ಲಿ ಊಟಕ್ಕೇನು ಗತಿ ಇತ್ಯಾದಿ. ಆದರೆ ಹೆಚ್ಚು ಸಾಹಸಿಕರು ಈ ಅವಕಾಶದ ಸದುಪಯೋಗ ಮಾಡಿಕೊಳ್ಳ ಬಹುದಿತ್ತು. ಯಾವುದೊಂದು ಹೋಟೆಲಿನ ಮಾಲಿಕರನ್ನು ಹಿಡಿದು ಊಟ ಗಿಟ್ಟಿಸಬಹುದಿತ್ತೇನೋ. ಅವರ ಮಗಳ ಗಂಡನಾಗಿ ಕಾರಿನಲ್ಲಿ ತಿರುಗುವ ಕನಸು ಕಾಣಬಹುದಿತ್ತೇನೋ. ಆದರೆ ಆ ಸಾಹಸ ನನ್ನಲ್ಲಿರಲಿಲ್ಲ. ಅದೊಂದು ಊನಾಂಶ— Minus point.

ಇಲ್ಲಿಂದ ಎರಡನೇ ಊನಾಂಶ. ಅದು ನನ್ನ ಪ್ರಥಮ ಉದ್ಯೋಗದ ಸೋಲು. ಯಾವ ವಿದ್ಯೆಯನ್ನೂ ಹೆಚ್ಚು ಕಷ್ಟವಿಲ್ಲದೆ ಕರಗತ ಮಾಡಿಕೊಳ್ಳುವ ಶಕ್ತಿ ಇದ್ದ ನಾನು ಉಡುಪಿಯ ಕಡಿಯಾಳಿ ಶಾಲೆಯಲ್ಲಿ ಒಂದು ವರ್ಷ ಉಪಾಧ್ಯಾಯ ವೃತ್ತಿ ಮಾಡಿದ ಮೇಲೆ ನಾನು ಅದರಲ್ಲಿ ಸಂಪೂರ್ಣ ಅಪ್ರಯೋಜಕನೆಂದು ನನಗೇ ಅನಿಸಿತು. ನನ್ನ ತೊಂದರೆಯೆಂದರೆ ಮಕ್ಕಳ ಮಟ್ಟದಲ್ಲಿ ಅವರಿಗೆ ಹೇಳಿ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಅದೂ ಎರಡನೇ ತರಗತಿಗೆ! ಶಿಕ್ಷಕನಿಗೆ ಉತ್ತಮ ಮೇಧಾಶಕ್ತಿ ಸಾಲುವುದಿಲ್ಲ, ಮತ್ತೇನೋ ಒಂದು ಬೇಕು. ಆ ಒಂದು ನನಗಿಲ್ಲ. ಇಂದಿಗೂ ನಾನು ಮಕ್ಕಳಿಗೆ ಪಾಠ ಹೇಳಲಾರೆ. ನಮೋ ಉಪಾಧ್ಯಾಯಾಯ! ಆಗಲೇ "ಜಯ ಕರ್ನಾಟಕ" "ಪ್ರಬುದ್ಧ ಕರ್ನಾಟಕ"ದಂಥ ಪ್ರಬುದ್ಧ ಪತ್ರಿಕೆಗಳು ಸ್ವೀಕರಿಸುವಂಥ ಕವಿತೆ ಬರೆದವನು, ಎಳೆ ಕರುಗಳಿಗೆ ಎಳೆ ಹುಲ್ಲು ತಿನ್ನಿಸಲಾರದೆ ಶಿಕ್ಷಕವೃತ್ತಿ ಬಿಟ್ಟು ಸ್ವದೇಶಿ ಅಂಗಡಿಯಲ್ಲಿ ಮಾರಾಟಗಾರ-ಕಂ-ಕಾರಕೂನ-ಕಂ-ಕಸಗುಡಿಸುವವ-ಕಂ-ಗ್ಯಾಸ್ ದೀಪ ಹಚ್ಚುವವನಾಗಿ ಸೇರಿದೆ.

ಮೊದಲು ಅಂಗಡಿ ಕೆಲಸಗಾರನಾಗಿ, ಮುಂದೆ ಪ್ರೆಸ್ ಲೆಕ್ಕಿಗನಾಗಿ, ಆ ಮೇಲೆ ಕಂಪನಿ ಸೆಕ್ರೆಟರಿಯಾಗಿ ನಾನು, ತುಳು ಚಳವಳಿಯ ಅಧ್ವರ್ಯು, ಕಾಂಗ್ರೆಸ್ ನಾಯಕ, ಮೀಮಾಂಸಾ ಶಿರೋಮಣಿಯಾಗಿಯೂ ಕ್ರಾಂತಿಕಾರಕ ವಿಚಾರಕ, ಸಾಹಸಿ ಆದ ಎಸ್. ಯು. ಪಣಿಯಾಡಿಯವರೊಡನೆ ಕಳೆದ ಸುಮಾರು ಏಳು ವರ್ಷಗಳು ಮೊದಲು ವ್ಯಥೆಯಲ್ಲಿ, ಆ ಮೇಲೆ ಸಾರ್ಥಕತೆಯಲ್ಲಿ ಮತ್ತು ಕೊನೆಯಲ್ಲಿ ಅನಾಹುತದಲ್ಲಿ ಕಳೆಯಿತು. ವ್ಯಥೆಯ ಕಾರಣ, ಅವಿದ್ಯಾವಂತ ಸಹಕಾರಿಗಳೊಡನೆ ನೀಗದಿದ್ದದ್ದು; ಸಾರ್ಥಕತೆ ಯಾವ ಕೆಲಸ ಕೊಟ್ಟರೂ ಕೆಲ ದಿನಗಳಲ್ಲಿ ಅದರಲ್ಲಿ ಸಹಜವಾದ ಪ್ರಾವೀಣ್ಯ ತೋರಿಸುವ ತೈಲ ಬುದ್ಧಿಯದ್ದು, ಅನಾಹುತ, ಪಣಿಯಾಡಿಯವರ ವ್ಯಾಪಾರ ವ್ಯವಹಾರಗಳು ಸೋಲು ಕಂಡು ಅವರು ಊರು ಬಿಟ್ಟು ಹೊರಟು ಹೋದದ್ದು. ಈ ಅವಧಿಯಲ್ಲಿ ಯಾವ ವಾಣಿಜ್ಯ ಶಾಲೆಗೆ ಹೋಗದೇನೇ ತುಂಬ ಜಿಗುಟಾದ ಲೆಕ್ಕ ಪತ್ರ ಮತ್ತು ಕಂಪನಿ ಕಾನೂನಿನಲ್ಲಿ ಸಾಕಷ್ಟು ಪರಿಜ್ಞಾನ ಪಡೆದೆ. ಅವರು ಆರಂಭಿಸಿದ ಲಿಮಿಟೆಡ್ ಕಂಪನಿಗಳ ಮೆಮೊರ್ಯಾಂಡಂ-ಆರ್ಟಿಕಲ್ಸನ್ನು ತಯಾರಿಸಿ ರಿಜಿಸ್ಟ್ರಿ ಮಾಡಿಸಲು ಸಮರ್ಥನಾದೆ. ಅದೆಲ್ಲ ನೀರು ಪಾಲಾದಾಗ ಒಮ್ಮೆಲೇ ಈಸುಬಾರದೆ ಹೊಳೆಯಲ್ಲಿ ಬಿದ್ದಂತಾದೆ.

ಆಗಲೇ ಮದುವೆಯಾಗಿ ಎರಡು ಮಕ್ಕಳ ತಂದೆಯಾಗಿದ್ದ ನನಗೆ ಈ ಕಂಪನಿಯೊಡನೆ ಬರೇ ನೌಕರನೆಂಬುದಕ್ಕಿಂತ ಹೆಚ್ಚಿನ ತೊಡಕಾಟವಿದ್ದುದರಿಂದ ಊರಲ್ಲಿ ಬೇರೆ ನೌಕರಿ ಸಿಗುವುದೂ ಕಷ್ಟವಿತ್ತು. ಆರು ತಿಂಗಳು ಅರೆ ಬರೆ ಕೆಲಸ ಮಾಡುತ್ತ ಕಡೆಗೆ ಮದ್ರಾಸಿನ ಒಂದು ಹೋಟೆಲಿಗೆ

ಬಿಲ್ ರೈಟರಾಗಿ ಹೋಗಬೇಕಾಯಿತು.

ಈ ಏಳು ವರ್ಷಗಳಲ್ಲಿ ವಾಣಿಜ್ಯ ಪ್ರಪಂಚ ದಲ್ಲಿದ್ದರೂ ಸಾಕಷ್ಟು ಬರವಣಿಗೆ ಪದ್ಯ-ಗದ್ಯ ಎರಡೂ ಸಾಗಿತ್ತು. ಅವುಗಳಲ್ಲಿ ಹೆಚ್ಚಂಶ "ಜಯ ಕರ್ನಾಟಕ"ದಲ್ಲಿ. ಕೆಲವಂಶ ಪಣಿಯಾಡಿ ಯವರು ಪ್ರಾರಂಭಿಸಿದ್ದ ಜನಪ್ರಿಯ "ಅಂತರಂಗ" ಪತ್ರಿಕೆಯಲ್ಲಿ (ಅದರ ಸಂಪಾದಕ ಮಂಡಲಿಯಲ್ಲಿ ನಾನಿದ್ದೆ) ಪ್ರಕಟವಾಗಿದ್ದವು. "ಅಂತರಂಗ"ದಲ್ಲಿ ಜನಪ್ರಿಯ ಬರವಣಿಗೆ ಹೇಗಿರಬೇಕೆಂಬ ಅನುಭವ ಸಿಕ್ಕಿತು. ಎಲ್ಲಕ್ಕಿಂತ ಹೆಚ್ಚಾಗಿ ಪಣಿಯಾಡಿಯವರ ಕ್ರಾಂತಿಕಾರಕ ವಿಚಾರಗಳು ಮನಸ್ಸಿನ ಅಧಿಕಾಂಶ ವೈದಿಕ ಬೇಡಿಕೆಗಳನ್ನು ಬಿಚ್ಚಿಹಾಕಿದ್ದವು- ಮತ್ತು ವಹಿಸಿಕೊಂಡ ಜವಾಬ್ದಾರಿಯನ್ನು ಜವಾಬ್ದಾರಿ ಯುತವಾಗಿ ನಿರ್ವಹಿಸುವುದೂ, ದಿನಕ್ಕೆ ಹದಿ ನಾರು-ಹದಿನೆಂಟು ಗಂಟೆ ದುಡಿಯುವುದೂ ಅಭ್ಯಾಸವಾಗಿತ್ತು.

ಮದ್ರಾಸಿನಲ್ಲಿಯೂ ಒಳ್ಳೇ ಕೆಲಸಗಾರನೆಂಬ ಮನ್ನಣೆ ಸಿಕ್ಕಿತು. ಸಂಬಳವೇನೂ ಬಹಳ ಹೆಚ್ಚಲ್ಲಿಲ್ಲ. ಆಗಿನ (೧೯೪೧) ೨೨ ರೂಪಾಯಿ! ಅಲ್ಲಿಂದ ನನ್ನ ಬಿಡುಗಡೆಗೆ ಕಾರಣ ಜಪಾನೀ ಯರು. ಅವರು ೧೯೪೨ ಏಪ್ರಿಲಿನಲ್ಲಿ ಕಾಕಿನಾಡ ಮತ್ತು ವಿಶಾಖಪಟ್ಟಣದ ಮೇಲೆ ಬಾಂಬು ಹಾಕಿದರು. ಮದ್ರಾಸಿನ ಮೇಲೂ ಹಾರಾಡಿ ದರು. ಮದ್ರಾಸಿನಲ್ಲಿ ಎಂದೂ ಇಲ್ಲದ ಕೋಲಾ ಹಲವೆದ್ದಿತು. ದಿನಕ್ಕೆ ೨೫,೦೦೦ದಂತೆ ಜನ ಪಟ್ಟಣತ್ಯಾಗ ಮಾಡಿದರು. ನನ್ನ ಹೆಂಡತಿಯ ಅಣ್ಣಂದಿರು ಧಾರವಾಡದಲ್ಲಿ ಒಂದು ಹೊಟೆಲ್ ಪ್ರಾರಂಭಿಸಿದ್ದರು. ಅವರು ನನಗೆ ಅಪಾಯಕರ ಮದ್ರಾಸು ಬಿಟ್ಟು ಧಾರವಾಡಕ್ಕೆ ಬರಲು ಒತ್ತಾಯಿಸಿದರು. ಬಾಂಬಿಗೆ ನಾನೇನು ಅಂಜಿದೆ ನೆಂದಲ್ಲ. ಸಾಮೂಹಿಕ ವಿಪತ್ತಿನಲ್ಲಿ ವ್ಯಕ್ತಿ ಅಪಾಯ ವನ್ನು ಸ್ವಾಗತಿಸಲು ಕಲಿಯುತ್ತಾನೆಂಬ ಆಶ್ಚರ್ಯ ಕರ ಅನುಭವ ನನಗಾಯಿತು. ಆದರೆ ಮದ್ರಾಸಿ ನಲ್ಲಿ ಹೋಟೆಲುಗಳಿಗೆ ಭವಿಷ್ಯ ಕರಾಳವೆಂದೆನಿ ಸಿತ್ತು. ಹೀಗೆ ನಾನು ಧಾರವಾಡಕ್ಕೆ ಬಂದೆ.

ನಾಲ್ಕಾರು ತಿಂಗಳೊಳಗೆ "ಸಂಯುಕ್ತ ಕರ್ನಾ ಟಕ"ದ ನಿರ್ವಾಹಕ ಸಂಪಾದಕರ ಆಮಂತ್ರಣ ದಂತೆ, ಅದರ ಮುದ್ರಣಾಲಯದ ನಿರ್ವಾಹಕ ನಾಗಿ ಹುಬ್ಬಳ್ಳಿಗೆ ಹೋದೆ, (೧೯೪೨ ನವಂಬರ್).

"ಸಂಯುಕ್ತ ಕರ್ನಾಟಕ" ಸಂಸ್ಥೆಯೊಡನೆ ನಾನು ನನ್ನ ಬದುಕಿನ ಬಹು ಭಾಗವನ್ನು ಕಳೆದೆ, ಸಾವಕಾಶವಾಗಿ ನಾನು ವ್ಯವಸ್ಥಾಪಕ ವಿಭಾಗದಿಂದ ಸಂಪಾದಕೀಯ ವಿಭಾಗಕ್ಕೆ ಸರಿದೆ. ಇಲ್ಲಿ ನನ್ನ ಇನ್ನೊಂದು ದೌರ್ಬಲ್ಯವನ್ನು ಹೇಳಬೇಕು; ಅದು ಇನ್ನೊಂದು ರೀತಿಯಲ್ಲಿ ಸೌಬಲ್ಯವೂ ಆಗಿತ್ತೆನ್ನು ವುದು ಬೇರೆ ಮಾತು. ನನ್ನ ಅಧೀನದಲ್ಲಿ ಕೆಲಸ ಮಾಡುವವರನ್ನು ಮೆನೇಜ್ ಮಾಡುವುದು ನನ್ನ ಗಂಟಲ ತುತ್ತಾಗಿರಲಿಲ್ಲ. ಇದಕ್ಕೆ ಬಳಸಬೇಕಾದ ತಂತ್ರಗಳು ನನ್ನ ಬುದ್ಧಿಯ ಥಿಯರೆಟಿಕಲ್ ಅಳವಿನೊಳಗಿನವಾದರೂ ನನ್ನ ಭಾವನೆಯ ಅಳವಿಗೆ ಹೊರಗಿನವಾಗಿದ್ದವು. ವ್ಯವಹಾರದಲ್ಲಿ ನಾನೊಬ್ಬ ಭೋಳೇ ಶಂಕರ. ಹೀಗೆ ನಾನು ಒಂಟಿ ಸಲಗನಾಗಲು ಹೆಚ್ಚು ಅವಕಾಶವಿರುವ ಸಂಪಾದ ಕೀಯ ವಿಭಾಗವನ್ನೇ ಇಷ್ಟಪಟ್ಟೆ. ಸಂಪ್ರದಾಯ ವಂತ ಸಂಸ್ಥೆಯಲ್ಲಿ ನಾನೊಬ್ಬ "ಕಮ್ಯುನಿಸ್ಟ್" ಎನಿಸಿದರೂ ಅಲ್ಲಿ ನನಗೆ ಯಾರೂ ಅಡ್ಡಗಾಲು ಹಾಕಲಿಲ್ಲ. ನನ್ನ ಅಪರಿಮಿತ ಕುತೂಹಲದಿಂದಾಗಿ, ಅಲ್ಲಿ ಬರುತ್ತಿದ್ದ ದೇಶಿ ವಿದೇಶಿ ಪತ್ರಿಕೆ, ಪುಸ್ತಕ ಗಳನ್ನು ಕಬಳಿಸುತ್ತ ೧೯೫೦ರೊಳಗೆ ನಾನೊಬ್ಬ "ಸರ್ವಜ್ಞ" ಎನಿಸಿದ್ದೆ. ಅದೇ ವರ್ಷದಲ್ಲಿ ನನ್ನದೇ ಸ್ವಂತ ನಿರ್ಣಯದಿಂದ ಲಾಂಗೂಲಾಚಾರ್ಯ ಎಂಬ ಹೆಸರಿನಿಂದ ಒಂದು ಲಘು ಬರಹದ ಸ್ತಂಭ ವನ್ನು "ಕರ್ಮವೀರ"ದಲ್ಲಿ ಆರಂಭಿಸಿದೆ. ಅದು ಓದುಗರ ಕಲ್ಪನೆಯನ್ನು ಸೆರೆಹಿಡಿಯಿತು. ಕೆಲ ವರ್ಷಗಳವರೆಗೆ ಶ್ರೀರಂಗರೇ ಅದನ್ನು ಬರೆ ಯುತ್ತಾರೆಂಬ ತಿಳಿವಳಿಕೆ ಓದುಗರಲ್ಲಿ ಹಬ್ಬಿತ್ತು. ನಾನು ಅದನ್ನು ತಿದ್ದಲು ಹೋಗಲಿಲ್ಲ. ಉದಾತ್ತ ತ್ಯಾಗದ ಮುಖವಾಡ ಹೊತ್ತು ರಾಜಕಾರಣ ಮಾಡುವವರ ಒಳ ಇರಾದೆಗಳನ್ನು ಗಾಳಿಗೆ ಹಿಡಿಯುವ ಪ್ರವೃತ್ತಿಯಿಂದಾಗಿ "ಪೇಸಿ

ಲಾಂಗೂಲಾಚಾರ್ಯ" ಎಂಬ ಬಿರುದನ್ನೂ ಪಡೆದೆ. ಲಾಂಗೂಲಾಚಾರ್ಯನ ಪ್ರಾಬಲ್ಯ ದಿಂದಾಗಿ ನಾನು ಬೇರೆ ಗಂಭೀರ ವಿಷಯಗಳ ಮೇಲೆ, ಮತ್ತು ಕಥೆ ಕವಿತೆಗಳನ್ನೂ, ಬರೆಯು ಬಲ್ಲೆನೆಂಬುದೂ, ಬರೆದಿದ್ದೇನೆಂಬುದೂ ಮರೆತು ಹೋಗುವಂತಾಯಿತು. ಆದರೆ "ಕರ್ಮವೀರ" ದಲ್ಲಿ ಕಳೆದ ಸುಮಾರು ಹನ್ನೆರಡು ವರ್ಷಗಳಲ್ಲಿ ನಾನು ಪುಸ್ತಕ, ಸಿನೆಮಾ ವಿಮರ್ಶೆಯಿಂದಾರಂಭಿಸಿ ಜಟಿಲ ವೈಜ್ಞಾನಿಕ ವಿಷಯಗಳವರೆಗೆ ಕಂಡ ಕಂಡ ವಿಷಯ ಗಳ ಮೇಲೆ ಬರೆದೆ. ನನ್ನ ಕುತೂಹಲದ ದಶ ಮುಖಗಳಿಗೆ ಅನ್ನ ಕೊಡಲು ನಾನು ಬಹಳ ಕಾಲವನ್ನು ಅಧಿಕ ಪ್ರಸಂಗದ ಓದಿನಲ್ಲಿ ಕಳೆಯು ತ್ತಿದ್ದುದರಿಂದ ಪ್ರಸ್ತುತ ಕಾರ್ಯವನ್ನು ಪೂರೈ ಸಲು ಬೇರೆಯೆ ದುಡಿಯಬೇಕಾಗುತ್ತಿದ್ದು ದಿನಕ್ಕೆ ೧೨-೧೪ ಗಂಟೆ ಕೆಲಸ ಬೀಳುತ್ತಿತ್ತು. ದುಡಿ ಯಲು ನಾನು ಗಟ್ಟಿಯಾಗಿದ್ದೆ. ಆ ದುಡಿಮೆ ನನಗೆ ಇಷ್ಟವಾಗಿದ್ದಾಗ.

೧೯೫೭ರಲ್ಲಿ ಡೈಜೆಸ್ಟ್ ಮಾದರಿಯ "ಕಸ್ತೂರಿ" ಪ್ರಾರಂಭವಾದಾಗ ಬೇಕಾದ ವಿಷ ಯದ ಮೇಲೆ ತಿಳಿಯಾಗಿ ಬರೆಯಬಲ್ಲ ಶಕ್ತಿ ನನ್ನ ದಾಗಿತ್ತು. ಹೊಸ ಪತ್ರಿಕೆಯ ಸಂಪಾದಕತ್ವ ನನ್ನ ಕೊರಳಿಗೆ ಬಿತ್ತು. ೧೮ ವರ್ಷ ಅದನ್ನು ಯಾರೂ "ಹೆಸರಿಡ"ದಂತೆ ನಿರ್ವಹಿಸಿ, ೧೯೭೪-೭೫ ರಲ್ಲಿ ಬಂದ ಕಡು ಕಾಯಿಲೆಯಿಂದ ಸತ್ತು ಸತ್ತು ಬದುಕಿದ ಮೇಲೆ ರಾಜೀನಾಮೆ ಯಿತ್ತು ಮುಕ್ತನಾದೆ.

ನನ್ನ ಕೆಲಸಕ್ಕೆ ಮಾನ್ಯತೆ "ಕಸ್ತೂರಿ"ಗೆ ಮೂರು ವರ್ಷವಾಗುವುದರೊಳಗೆ ಸಿಕ್ಕಿತ್ತು. ನನ್ನ ಲೇಖನ ವೃತ್ತಿಗೆ "ಕರ್ಮವೀರ"ದಲ್ಲಿರುವಾ ಗಲೇ ಮನ್ನಣೆ ದೊರಕಿತ್ತು. ನನ್ನ ಕವಿತಾ ಸಂಗ್ರಹ "ನವನೀರದ"ಕ್ಕೆ ಮುಂಬಯಿ ಸರಕಾ ರದ ಬಹುಮಾನವೂ ಬಂದಿತ್ತು. ನನ್ನ ಹರಟೆ ಗಳ ಒಂದು ಸಂಗ್ರಹ "ಪ್ರಹಾರ" ಐಳನೇ ದಶಕ ದಲ್ಲಿ ಪ್ರಕಟವಾಗಿತ್ತು. ನಾನು ಭೋಳೇ ಮನುಷ್ಯ ಅಂದೆನಲ್ಲ. ಈ ಕೊರತೆಗಳಲ್ಲಿ ನನ್ನ ಯೋಗ್ಯತೆ ಯನ್ನು ನಾನು ಸಾಕಷ್ಟು ಬೇಗ ಮನಗಾಣದಿ ದ್ದದ್ದೂ ಒಂದು. ಅದನ್ನು ಮನಗಂಡವರು ಬೇರೆ ಯವರು; ಮತ್ತು ಅವರಿಂದಲೇ ನನ್ನ ವೃತ್ತಿ ಯಲ್ಲಿ ಮೇಲೇರಲು ಸಾಧ್ಯವಾದದ್ದು. ೧೯೫೮ರ ಸುಮಾರಿಗೆ ಒಂದು ಪತ್ರಿಕೋದ್ಯೋಗಿ ತಂಡ ದೊಡನೆ ನಾನು ಉತ್ತರ ಭಾರತ ಪ್ರವಾಸ ಕೈಕೊಂಡ ಮೂರು ವಾರಗಳ ಅವಧಿಯಲ್ಲಿ ತಾನೇ, ನನಗೆ ನಾನು ಸ್ವಲ್ಪ ಅಸಾಧಾರಣ ಮನುಷ್ಯ ಎಂದು ಪ್ರತೀತವಾದದ್ದು. ವಿದೇಶೀ ರಾಯಭಾರ ವರ್ಗದವರು ನಮ್ಮ ಕಚೇರಿಗೆ ಭೆಟ್ಟಿ ಕೊಟ್ಟಾಗಲೂ ನನ್ನ ಪ್ರಶ್ನೆಗಳಿಂದ ಅವರು ಪ್ರಭಾವಿತರಾಗುತ್ತಿದ್ದದ್ದು ಗೋಚರಕ್ಕೆ ಬರು ತ್ತಿತ್ತು. ಆದರೆ ಇದೆಲ್ಲದರ ಪ್ರಯೋಜನ ತೆಗೆದು ಕೊಳ್ಳುವ ಚಾಕಚಾಕ್ಯ ನನಗಿರಲಿಲ್ಲ.

ನಾನು ಆಸ್ಪತ್ರೆಯಲ್ಲಿ ಎರಡೂವರೆ ತಿಂಗಳು ಸಾವು ಬದುಕುಗಳ ನಡುವೆ ಡೋಲಾಯಮಾನ ನಾಗಿ ಮಲಗಿದ್ದಾಗ ನನ್ನ ಆರೋಗ್ಯ ವಿಚಾರಿಸಿ ನಾಡಿನ ಓದುಗರು ಬರೆಯುತ್ತಿದ್ದ ಆತಂಕ ಪೂರ್ಣ ಪತ್ರಗಳು, ನನ್ನನ್ನು ಕಾಣಲು ಬರು ತ್ತಿದ್ದ ಜನರ ಧಾರೆ ನನಗೂ, ನನ್ನ ಕುಟುಂಬದ ಜನರಿಗೂ ಒಂದು ಆಶ್ಚರ್ಯವಾಗಿತ್ತು. ಕೆಲ ಮಟ್ಟಿಗೆ ನನ್ನನ್ನು ಬದುಕಿಸಿಯೇ ಬಿಡಬೇಕೆಂದು ಡಾಕ್ಟರುಗಳಲ್ಲಿ ಒಂದು ಉತ್ಸಾಹವನ್ನೂ ಅದು ಪ್ರಚೋದಿಸಿತ್ತು. ಸತ್ತರೂ ಬದುಕಿದರೂ ಇದು ಒಂದು ಧನ್ಯತೆಯ ಭಾವ ನನ್ನದಾಯಿತು.

ನನ್ನ ವಿಶ್ರಾಂತಿಯ ನಂತರ ಕೂಡ ನನ್ನ ಬರ ವಣಿಗೆ ಮುಂದುವರಿದಿದೆ. ಮಣಿಪಾಲದ ಪತ್ರಿಕಾ ಗುಂಪಿನವರು ಮೊಟ್ಟ ಮೊದಲು ನನ್ನ ಲೇಖನಗಳನ್ನು ತಾವಾಗಿ ಸ್ವಾಗತಿಸಿದವರು. "ಕಸ್ತೂರಿ"ಗೂ ನಾನು ಬರೆಯುತ್ತಿದ್ದೇನೆ. ನನ್ನ ಒಂದು ಕವಿತಾ ಸಂಗ್ರಹ ("ಕೆಲವು ಪದ್ಯಗಳು") ಮತ್ತು ಎರಡು ಹರಟೆ ಸಂಗ್ರಹಗಳು ("ಲೋಕದ ಡೊಂಕು" ಮತ್ತು "ವಿಪರೀತ") ಪ್ರಕಟವಾದವು. ನಿವೃತ್ತಿಗಿಂತ ಎರಡು ವರ್ಷ

ಮೊದಲು ಬರೆದ ಸ್ವಾತಂತ್ರ್ಯದ ೨೫ ವರ್ಷಗಳ ಪರಾಮರ್ಶೆಯೂ ಮೆಚ್ಚಿಗೆ ಗಳಿಸಿತ್ತು. ನನ್ನ ತುಳು ಕವಿತೆಗಳ ಒಂದು ಸಂಗ್ರಹ ಹೊರಬಂತು.

ನನಗೆ ಸನ್ಮಾನಗಳೂ ಆದವು. ನನ್ನ ವೃತ್ತಿ ಬಾಂಧವರು ನನಗೆ ಪತ್ರಿಕೋದ್ಯೋಗದ ಪಿ. ಆರ್. ರಾಮಯ್ಯ ಪ್ರಶಸ್ತಿ ನೀಡಿದರು. ಮೈಸೂರಿನಲ್ಲಿ ನನಗೆ ಸಾರ್ವಜನಿಕ ಸನ್ಮಾನ ಮತ್ತು ನಿಧಿ ಪ್ರದಾನವಾಯಿತು. ಪರಿಷತ್ತಿನ ವಜ್ರಮಹೋತ್ಸವದಲ್ಲಿ ಗೌರವಿಸಲ್ಪಟ್ಟೆ. ಕರ್ನಾಟಕ ಸಾಹಿತ್ಯ ಅಕಾದಮಿಯೂ ನನಗೆ ಪ್ರಶಸ್ತಿ ಕೊಟ್ಟಿದೆ. ವರ್ಧಮಾನ ಪ್ರಶಸ್ತಿಯನ್ನೂ ಪಡೆದೆ. ಇನ್ನೂ ಅನೇಕ ಸಂಘ ಸಂಸ್ಥೆಗಳು ನನ್ನನ್ನು ಗೌರವಿಸಿವೆ. ನಿಶಿತವಾದ ವಿಶ್ಲೇಷಣಾತ್ಮಕ ಬರಹದಿಂದ ನಾನೊಬ್ಬ "ವಿಚಾರವಾದಿ" ಎಂದೂ ಅನಿಸಿಕೊಂಡಿದ್ದೇನೆ. ಕರ್ನಾಟಕ ಸರಕಾರದ ಗೌರವ ವೇತನ ನನಗೆ ಲಭ್ಯವಾಗಿದೆ. ಬದುಕಿದ್ದೇನೆ. ಯಾರಿಗೂ ಆರ್ಥಿಕವಾಗಿ, ಶಾರೀರಿಕವಾಗಿ ಭಾರವಾಗದೆ ಬದುಕಿದ್ದೇನೆ, ಎಂಬ ಸಮಾಧಾನ ಈ ವರೆಗೆ ಇದೆ. ನನ್ನ ಪಿತೃಗಳಿಗೆ ಕವೋಷ್ಣವಾದ ತರ್ಪಣವನ್ನು ಕೊಡುವುದು ತಪ್ಪಿದೆ.

ಆದರೆ ಇದರಲ್ಲಿ ನನ್ನದೆಷ್ಟು, ನನ್ನದಲ್ಲದ್ದೆಷ್ಟು? ನಾನು ಭವಸಾಗರದಲ್ಲಿ ಈಸಿದ್ದೆಷ್ಟು, ತೇಲಿದ್ದೆಷ್ಟು? ನನ್ನ ಯೋಗ್ಯತೆಯನ್ನು ಗುರುತಿಸಿ ಇತರರು ನನ್ನ ತೇರ್ಗಡೆಗೆ ನೆರವಾಗದಿದ್ದರೆ ನಾನು ಏನಾಗುತ್ತಿದ್ದೆ? ಬಹುಶಃ ಏನೂ ಆಗುತ್ತಿರಲಿಲ್ಲ. ಅನಾಹುತಗಳು ಕೂಡ ಹಿಂದಿರುಗಿ ನೋಡುವಾಗ ನನಗೆ ವರಗಳೇ ಆಗಿ ಪರಿಣಮಿಸಿವೆ. ಉಡುಪಿಯಲ್ಲಿ ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಗೆ ಕೇಡು ಆಗಿದ್ದಿಲ್ಲವಾದರೆ ನಾನು ಬಹುಶಃ ಒಳ್ಳೆಯ ಅಕೌಂಟಂಟ ಅನಿಸಬಹುದಾಗಿತ್ತು; ಕೀರ್ತಿ ಲಭಿಸುತ್ತಿರಲಿಲ್ಲ. ಹೋಗಲಿ, ಜಪಾನೀಯರು ಪೂರ್ವ ಕರಾವಳಿಯಲ್ಲಿ ಬಾಂಬ್ ಬೆದರಿಕೆ ಎಬ್ಬಿಸದಿದ್ದಿದ್ದರೆ ನಾನು ಧಾರವಾಡಕ್ಕೆ ಬರುತ್ತಿದ್ದೆನೇ? ಮುಂದಿನದೆಲ್ಲ ಜರಗುತ್ತಿತ್ತೆ? ನಾನು ೧೯೪೦ ಡಿಸೆಂಬರ್ ೩೧ ರಂದು ಊರು ಬಿಟ್ಟಾಗ ನನ್ನದೆಲ್ಲ ಮುಗಿದೇ ಹೋಯಿತು ಅಂದುಕೊಂಡಿದ್ದೆ. ಭವಿತವ್ಯತೆಯ ಪಟ್ಟುಗಳು ಎಷ್ಟು ಅನೂಹ್ಯವಾಗಿರುತ್ತವೆ!

ನನ್ನ ಬದುಕು ಒಂದು ದಾರಿ ಹಿಡಿಯುವುದಕ್ಕೆ ಕಾರಣರಾದ ನನ್ನ ದೊಡ್ಡಣ್ಣ ವೆಂಕಟದಾಸಾಚಾರ್ಯರು, ನಾನು ಸಮುದ್ರಕ್ಕೆ ಬಿದ್ದಾಗ ನನ್ನ ಹೆಂಡತಿ ಮಕ್ಕಳನ್ನು ನೋಡಿಕೊಂಡ ಅವಳ ತಂದೆ ಮತ್ತು ಅಣ್ಣಂದಿರು, ನನ್ನೊಡನೆ ಬಡತನದ ಬೇಗೆಯನ್ನು ಪಿಟ್ಟೆನ್ನದೆ ಸಹಿಸಿಕೊಂಡ ನನ್ನ ಹೆಂಡತಿ ಲಕ್ಷ್ಮಿ, ನಾನು ಸಾಯುತ್ತಿದ್ದಾಗ ಡಾಕ್ಟರುಗಳನ್ನು ಪುಸಲಾಯಿಸಿ ನನಗೆ ಶಸ್ತ್ರಕ್ರಿಯೆ ಮಾಡಿಸಿದ ನನ್ನ ಭಾವಮೈದುನ ಜನಾರ್ದನ, ಕೇವಲ ಒಬ್ಬ ವಿಕ್ಷಿಪ್ತ ಪತ್ರಿಕೋದ್ಯೋಗಿಯನ್ನು ಬದುಕಿಸಲು ಹಗಲಿರುಳು ಸಾವಿನೊಡನೆ ಸೆಣಸಿದ ಕರ್ನಾಟಕ ಮೆಡಿಕಲ್ ಕಾಲೇಜಿನ ಡಾಕ್ಟರರು, ೭೩ ದಿವಸ ಕಣ್ಣು ಮುಚ್ಚದೆ ನನ್ನ ಅರೆಜೀವದ ದೇಹವನ್ನು ಕಾಯುತ್ತಿದ್ದ ನನ್ನ ಹೆಂಡತಿ (ನನ್ನ ಮೇಲೆ ಶಸ್ತ್ರಕ್ರಿಯೆ ಮಾಡಿದ ಡಾ. ಸಿ. ಆರ್. ರಘು ಅವಳನ್ನು ಸತಿ ಸಾವಿತ್ರಿಯೆಂದೇ ಕರೆದಿದ್ದಾರೆ), ನನ್ನಲ್ಲಿ ಗುಣವನ್ನು ಕಂಡ "ಸಂಯುಕ್ತ ಕರ್ನಾಟಕ"ದ ಸಂಪಾದಕರಾದ ಶ್ರೀ ಮೊಹರೆ ಹಣಮಂತರಾಯರು, ಶ್ರೀ ಹ. ರಾ. ಪುರೋಹಿತರು ಮತ್ತು ಡಾ. ಆರ್. ಆರ್. ದಿವಾಕರರು, ನನ್ನ ಮೇಲೆ ಎಳ್ಳಷ್ಟೂ ಕರುಬು ತೋರಿಸದೆ ಒಡನಾಡಿದ ಸಹೋದ್ಯೋಗಿಗಳು, ನನ್ನ ಸನ್ಮಾನ ಮತ್ತು ಪುಸ್ತಕಗಳ ಪ್ರಕಟನೆಗಳಲ್ಲಿ ಅವಿರತ ಆಸಕ್ತಿ ತೋರಿಸಿದ ನನ್ನ ಅನಿಮಿತ್ತ ಬಂಧು ಶ್ರೀ ಜಿ. ಟಿ. ನಾರಾಯಣರಾಯರು, ಇನ್ನೂ ಎಷ್ಟೋ ಸ್ನೇಹಿತರು ಯಾರು ಯಾರಿಗೆ ಈ ಯಜ್ಞದಲ್ಲಿ ಎಷ್ಟು ಹವಿರ್ಭಾಗ ಸಿಗಬೇಕೋ ಹೇಳಲಾರೆ. ಎಲ್ಲವನ್ನೂ ಕಳೆದ ಮೇಲೆ ನನ್ನದು ಎಂದುಳಿಯಬಹುದಾದದ್ದು ಎಷ್ಟು? ❁

ಕಲ್ಪನೆ ಮತ್ತು ವಾಸ್ತವಿಕತೆ

ಮಹಾಭಾರತ ಯುದ್ಧ ಹದಿನೆಂಟು ದಿನಗಳ ಕಾಲ ನಡೆಯಿತೆಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಅತಿರಥ, ಮಹಾರಥರಿಂದ ಕೂಡಿದ ಈ ಯುದ್ಧದಲ್ಲಿ ಕೌರವರಿಗೆ ಸೇರಿದ ಹನ್ನೊಂದು ಅಕ್ಷೋಹಿಣಿ ಮತ್ತು ಪಾಂಡವರಿಗೆ ಸೇರಿದ ಏಳು ಅಕ್ಷೋಹಿಣಿ ಸೈನ್ಯ ನಾಶವಾದವು.

ಆದರೆ ಈ ಅಕ್ಷೋಹಿಣಿ ಸಂಖ್ಯೆ ನಿಜವೇ ಆಗಿದ್ದರೆ, ಯಾರಿಗಾದರೂ ಗಾಬರಿಯೆನಿಸುವುದು ಸಹಜ. ಏಕೆಂದರೆ ಆ ಯುದ್ಧದಲ್ಲಿ ಸುಮಾರು ಐವತ್ತು ಲಕ್ಷ ಕಾಲಾಳುಗಳು ನೇರವಾಗಿ ಹೋರಾಡಿ ಸತ್ತರು. ಒಂದು ಲಕ್ಷ ಮೂವತ್ತು ಸಾವಿರ ರಥ(ಕುದುರೆಗಳ ಸಹಿತ)ಗಳು ನುಚ್ಚು ನೂರಾದವು. ಅಷ್ಟೇ ಸಂಖ್ಯೆಯ ಆನೆಗಳು ಮತ್ತು ಆನೆಗಳ ಮೂರರಷ್ಟು ಕುದುರೆಗಳೂ ಸತ್ತು ಹೋದವು.

ಈ ಆನೆ, ಕುದುರೆ, ರಥ, ಕಾಲಾಳುಗಳಿಗೆ ಆಹಾರ, ಆಯುಧ ಮುಂತಾದ ಸಾಮಗ್ರಿಗಳನ್ನು ಒದಗಿಸಲು, ಎಷ್ಟೋ ಲಕ್ಷ ಜನ ಪರಿಚಾರಕರೂ ಇರಲೇಬೇಕಷ್ಟೇ.

ಕುರುಕ್ಷೇತ್ರದಲ್ಲಿ ನಡೆದ ಈ ಯುದ್ಧದ ಸ್ಥಳವನ್ನು ಇಂದಿನ ದೆಹಲಿ ಮತ್ತು ಥಾನೇಶ್ವರದ ಮಧ್ಯ ಭಾಗವೆಂದು ಹೇಳಲಾಗುತ್ತದೆ. ಆದರೆ ಇಷ್ಟೊಂದು ವಿಶಾಲ ಸೈನ್ಯ ಈ ಮೈದಾನದಲ್ಲಿ ನಿಂತು ಹೋರಾಡಿದ್ದಾದರೂ ಹೇಗೆ?

ಬ್ರಿಟಿಶರು ಭಾರತಕ್ಕೆ ಬರುವ ಮುಂಚೆ ನಮ್ಮಲ್ಲಿ ಜನಗಣತಿಯ ವ್ಯವಸ್ಥಿತ ಪದ್ಧತಿ ಇರಲಿಲ್ಲ. ಲಾರ್ಡ್ ರಿಪನ್ ವೈಸ್‌ರಾಯನಾಗಿದ್ದ ಕಾಲದಲ್ಲಿ ಮೊಟ್ಟ ಮೊದಲು ಜನಗಣತಿಯ (೧೬೭೧) ಕಾರ್ಯ ಕೈಕೊಂಡಾಗ ಭಾರತದ ಜನಸಂಖ್ಯೆ (ಇಂದಿನ ಬರ್ಮಾ ಪಾಕಿಸ್ತಾನ, ಬಂಗ್ಲಾದೇಶ, ಶ್ರೀಲಂಕಾ ಸೇರಿ) ಇಪ್ಪತ್ತು ಕೋಟಿಯಾಗಿತ್ತು. ಇದಕ್ಕೂ ಎಷ್ಟೋ ಶತಮಾನಗಳ ಮೊದಲು ನಡೆದದ್ದೆಂದು ಹೇಳಲಾದ ಮಹಾಭಾರತ ಯುದ್ಧದಲ್ಲಿ ಇಷ್ಟೊಂದು ವಿಶಾಲ ಸಂಖ್ಯೆಯಲ್ಲಿ ಸೈನ್ಯಕ್ಕೆ ಜನರು ಸೇರಿದ್ದಾದರೂ ಹೇಗೆ? ಕೃಷಿಕರಿಗೆ ಅಗತ್ಯವಾದ, ನೇಗಿಲು, ಕುಳ, ಸಲಿಕೆ, ಪಿಕಾಸು, ಹಾರೆಗಳಿಗೇ ಕಬ್ಬಿಣ ಅಲಭ್ಯವಾಗಿದ್ದ ಆ ಕಾಲದಲ್ಲಿ, ರಥಗಳಿಗೂ ಆಯುಧಗಳಿಗೂ ಕಬ್ಬಿಣ ಹೇಗೆ ಸಿಕ್ಕಿತು?

ಇತಿಹಾಸದ ಪುಟಗಳನ್ನು ತಿರುವಿದರೆ ಮೌರ್ಯ ಸಾಮ್ರಾಜ್ಯಕ್ಕಿಂತ ಮುಂಚೆ ನಮ್ಮಲ್ಲಿ ವ್ಯವಸ್ಥಿತ ಸೈನ್ಯ ಪದ್ಧತಿ ಇರಲಿಲ್ಲ. ಜನಸಂಖ್ಯೆಯ ಹೆಚ್ಚಳವೂ ಇರಲಿಲ್ಲ. ಚಂದ್ರಗುಪ್ತನ ಶಿಬಿರದಲ್ಲಿ ಕೇವಲ ನಾಲ್ಕು ಲಕ್ಷ ಸೈನಿಕರಿದ್ದರೆಂದು ತಿಳಿದುಬರುತ್ತದೆ.

ಇನ್ನೊಂದು ವೈಶಿಷ್ಟ್ಯವೆಂದರೆ, ಮಹಾಭಾರತದಲ್ಲಿ ಪರ್ವಗಳು '೧೮', ಅದಕ್ಕೆ ಸೇರಿದ (?) ಭಗವದ್ಗೀತೆಯ ಅಧ್ಯಾಯಗಳು '೧೮', ಯುದ್ಧ ನಡೆದ ದಿನಗಳೂ '೧೮'. ಅಂತೆಯೇ ಅಕ್ಷೋಹಿಣಿ ಸೈನ್ಯ ಕೂಡ '೧೮' ಇರಬಹುದು!

(ಸಂಗ್ರಹ)

—ಕಿಬ್ಬಳ್ಳಿ ಗಣಪತಿ ಶರ್ಮಾ